RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 97 ಪುಟ: 06 ಬುಧವಾರ 12-03-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

ಬೆಂಗಳೂರು | ಬೆಂ.ಗ್ರಾಮಾಂತರ ತುಮಕೂರು ಚಿತ್ರದುರ್ಗ ಮೈಸೂರು ಮಂಡ್ಯ ರಾಮನಗರ ಚಾ.ನಗರ ಹಾಸನ ಚಿಕ್ಕಬಳ್ಳಾಪುರ ಕೋಲಾರ

Honourary Editor: Venkatesh



ತಮಗಿಂತ 36 ವರ್ಷ ಕಿರಿಯ ನಟಿ ಮೇಲೆ ಲವ್

ಜಯಮಾಲಾರನ್ನು ಉಳಿಸಿದ್ದು ರಾಜ್‌ಕುಮಾರ್

ಅವರು ಹೋಗಿದ್ರೆ ಕಲ್ಪನಾ ಸಾಯುತ್ತಿರಲಿಲ್ಲ.. ಪುಟ 6

# ರಾಜ್ಯಪಾಲರಿಗೆ ದೂರು

## ಕಾಂಗ್ರೆಸ್ ಗ್ಯಾರಂಟಿ ಅನುಷ್ಠಾನ ಸಮಿತಿ ವಿಸರ್ಜನೆಗೆ ದೋಸ್ತಿಗಳ ಆಗ್ರಹ

**ಬೆಂಗಳೂರು:** ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯನ್ನು ಕೂಡಲೇ ವಿಸರ್ಜನೆಗೊಳಿಸಬೇಕು ಎಂದು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಕ್ಷಗಳು ಬುಧವಾರ ರಾಜ್ಯಪಾಲ ಥಾವರ್‌ಚಂದ್‌ಗೆಹ್ಲೋತ್ ಅವರಿಗೆ ದೂರು ನೀಡಿವೆ.

ಗ್ಯಾರಂಟಿ ಯೋಜನೆ ಅನುಷ್ಠಾನದ ನೆಪದಲ್ಲಿ ಸಾರ್ವಜನಿಕರ ತೆರಿಗೆ ಹಣವನ್ನು ಪಕ್ಷದ ಕಾಯಕರ್ತರಿಗೆ ವಿತರಿಸುತ್ತಿರುವ ಕಾಂಗ್ರೆಸ್ ಸರ್ಕಾರದ ನಡೆಯನ್ನು ವಿರೋಧಿಸಿ ಸದನದ ಒಳಗೆ ಮತ್ತು ಹೊರಗೆ ತೀವ್ರ ಹೋರಾಟ ನಡೆಸುತ್ತಿರುವ ದೋಸ್ತಿಗಳು ಬುಧವಾರ ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೆ ದೂರು ನೀಡಿದವು.

ಮಂಗಳವಾರ ಇಡೀ ದಿನ ವಿಧಾನಸಭೆ ಕಲಾಪಕ್ಕೆ ಅಡ್ಡಿಪಡಿಸಿ ಸದನದ ಬಾವಿಗಿಳಿದು ಧರಣಿ ನಡೆಸಿದ್ದ ಪ್ರತಿಪಕ್ಷಗಳ ನಾಯಕರುಗಳು ಬುಧವಾರವೂ ವಿಧಾನಸಭೆಯ ಕಾರ್ಯಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ್ದಲ್ಲದೇ, ವಿಧಾನಸೌಧದಿಂದ ರಾಜಭವನದವರೆಗೆ ಕಾಲ್ನಡಿಗೆಯಲ್ಲಿ ನಡೆದು ದೂರು ಸಲ್ಲಿಸಿದವು.

ವಿಧಾನ ಸೌಧದ ಕೆಂಗಲ್ ಹನುಮಂತಯ್ಯ ಪ್ರತಿಮೆಯ ಬಳಿ ದೋಸ್ತಿಗಳ ಒಂದು ತಂಡ ಪ್ರತಿಭಟನೆ ನಡೆಸಿದರೇ ಮತ್ತೊಂದು ತಂಡ ರಾಜಭವನಕ್ಕೆ ತೆರಳಿ ದೂರು ನೀಡಿತು.

ಈ ವೇಳೆ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರುಗಳು ಕಾಂಗ್ರೆಸ್ ಪಕ್ಷದ ಖಾತರಿ ಅನುಷ್ಠಾನ ಸಮಿತಿಯನ್ನು ಕೂಡಲೇ ವಿಸರ್ಜಿಸಬೇಕು. ಸಾರ್ವಜನಿಕ ನಿಧಿ ಮತ್ತಷ್ಟು ದುರುಪಯೋಗವಾಗುವುದನ್ನು ತಪ್ಪಿಸಬೇಕು. ಈಗಾಗಲೇ ಸಮಿತಿಗೆ ಹಂಚಿಕೆಯಾಗಿರುವ ಹಣವನ್ನು ಹಿಂಪಡೆದು ಅದನ್ನು ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ಬಳಸುವಂತೆ ನಿರ್ದೇಶಿಸಬೇಕು. ಪ್ರಜಾಸತ್ತಾತ್ಮಕ ಮೇಲ್ವಿಚಾರಣೆಯನ್ನು ಮರುಸ್ಥಾಪಿಸಿ ಸ್ಥಳೀಯ ಸರ್ಕಾರಿ ಕಾರ್ಯಕ್ರಮ ಅನುಷ್ಠಾನದಲ್ಲಿ ಚುನಾಯಿತಪ್ರತಿನಿಧಿಗಳ ಪಾತ್ರಗಳನ್ನು ಪುನರ್‌ಸ್ಥಾಪಿಸಬೇಕು. ಅನಿಯಂತ್ರಿತ ರಾಜಕೀಯನ ನೇಮಕಾತಿಗಳನ್ನು ತಡೆಯಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಂದ ಶಾಸಕರ ಹಕ್ಕು ಮೊಟಕುಗೊಳಿಸುವ ಕೆಲಸ ಆಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಪುಟ 2






ತಮಿಳುನಾಡಿನ ಅರಣ್ಯ ಸಚಿವ ಪೊನ್ನುಮುಡಿ, ರಾಜ್ಯಸಭೆ ಸದಸ್ಯ ಎಂ ಎಂ ಅಬ್ದುಲ್ಲ ಅವರು ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಬುಧವಾರ ಭೇಟಿ ಮಾಡಿ, ಕೇಂದ್ರ ಸರಕಾರದ ಉದ್ದೇಶಿತ ಲೋಕಸಭೆ ಕ್ಷೇತ್ರಗಳ ಮರುವಿಂಗಡಣೆ ಕುರಿತು ಮುಂದೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ತಮಿಳುನಾಡು ಸಿಎಂ ಸ್ಟಾಲಿನ್ ಅವರು ಚೆನ್ನೈನಲ್ಲಿ ಇದೇ 22 ರಂದು ಏರ್ಪಡಿಸಿರುವ ದಕ್ಷಿಣ ಭಾರತ ರಾಜ್ಯಗಳ ಪ್ರತಿನಿಧಿಗಳ ಸಭೆಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಿದರು.

## ಕಡಿಮೆ ದಾಖಲಾತಿ ಪ್ರಾಥಮಿಕ ಶಾಲೆ ಮುಚ್ಚಿಲ್ಲ



**ಬೆಂಗಳೂರು:** ರಾಜ್ಯದಲ್ಲಿ 49,679 ಸರ್ಕಾರಿ ಶಾಲೆಗಳಿದ್ದು, ಇವುಗಳ ಪೈಕಿ 4,264 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಾರೆ ಎಂದು ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ವಿಧಾನಸಭೆಯಲ್ಲಿ ಬುಧವಾರ ಹೇಳಿದ್ದಾರೆ.

ಕಡಿಮೆ ದಾಖಲಾತಿಯಿಂದಾಗಿ ಕರ್ನಾಟಕದ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.ಆದಾಗ್ಯೂ, ದಾಖಲಾತಿ ಪುನರಾರಂಭಗೊಳ್ಳುವವರೆಗೆ ವಿದ್ಯಾರ್ಥಿಗಳಿಲ್ಲದ ಶಾಲೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದಿದ್ದಾರೆ.ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ಎನ್.ಎ.ಹ್ಯಾರಿಸ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವ ಮಧು ಬಂಗಾರಪ್ಪ ಈ ಶಾಲೆಗಳನ್ನು ಪುಟ 2

## ಲೋಕಾಯುಕ್ತ ಅಧಿಕಾರಿಗಳ ವಿರುದ್ಧ ಸ್ನೇಹಮಯಿ ಕೃಷ್ಣ ಕೇಂದ್ರಕ್ಕೆ ದೂರು

**ಮೈಸೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಲ್ಲಿ ನಡೆದಿದೆ ಎನ್ನಲಾಗಿರುವ ಹಗರಣದ ತನಿಖೆಯನ್ನು ಮೈಸೂರು ಲೋಕಾಯುಕ್ತ ನಡೆಸಿದ್ದು, ಈಗಾಗಲೆ ಹೈಕೋರ್ಟ್‌ಗೆ ವರದಿ ಸಲ್ಲಿಕೆ ಮಾಡಿದೆ. ಆದರೆ, ಲೋಕಾಯುಕ್ತ ಅಧಿಕಾರಿಗಳು ಸಾಕ್ಷ್ಯಾಧಾರಗಳಿದ್ದರೂ ಸುಳ್ಳು ವರದಿ ಸಲ್ಲಿಕೆ ಮಾಡಿದ್ದಾರೆಂದು ಮೂವರು ಅಧಿಕಾರಿಗಳ ವಿರುದ್ಧ ಕೇಂದ್ರ ಜಾಗೃತಿ ಆಯೋಗಕ್ಕೆ ದೂರುದಾರ ಸ್ನೇಹಮಯಿ ಕೃಷ್ಣ ಲಿಖಿತ ದೂರು ನೀಡಿದ್ದಾರೆ.

ಮುಡಾ ಹಗರಣಕ್ಕೆ ತನಿಖೆಯಲ್ಲಿ ರಾಜಕಾರಣಿಗಳ ಪ್ರಭಾವಕ್ಕೆ ಒಳಗಾಗಿ ಕ್ರಮ ಕೈಗೊಂಡಿಲ್ಲ. ಸುಳ್ಳು ದಾಖಲೆಗಳನ್ನು ನೀಡಿದ್ದಾರೆ ಎಂದು ಆರೋಪಿಸಿ ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬಿಕರ್, ಪೊಲೀಸ್ ಮಹಾ ನಿರೀಕ್ಷಕ ಸುಬ್ರಹ್ಮಣೇಶ್ವರರಾವ್, ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ವಿರುದ್ಧ ದೂರು ನೀಡಿದ್ದಾರೆ.



ಭ್ರಷ್ಟ ರಾಜಕಾರಣಿ ಹಾಗೂ ಹಾಲಿ ಸಿಎಂ ಸಿದ್ದರಾಮಯ್ಯನವರ ಪ್ರಭಾವಕ್ಕೆ ಒಳಗಾಗಿ, ಪುಟ 2

## ಇಂದಿನಿಂದ 'ಡೆವಿಲ್' ಚಿತ್ರೀಕರಣ

**ಮೈಸೂರು:** ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಬಳಿಕ ನೆನೆಗುದಿಗೆ ಬಿದ್ದಿದ್ದ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯಿಸುತ್ತಿರುವ ಡೆವಿಲ್ ಚಿತ್ರದ ಚಿತ್ರೀಕರಣ ಇಂದಿನಿಂದ ಮೈಸೂರಿನಲ್ಲಿ ಪುನಾರಂಭಗೊಂಡಿದ್ದು ಶೂಟಿಂಗ್ ಗೂ ಮುನ್ನ ನಟ ದರ್ಶನ್ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದಿದ್ದಾರೆ. ಮಾರ್ಚ್ 15ರವರೆಗೆ ಡೆವಿಲ್ ಚಿತ್ರದ ಪುಟ 2

## ರನ್ಯಾ ಬಳಿಕ ಇಬ್ಬರು ನಟಿಯರಿಗೆ ಸಿಸಿಬಿ ಶಾಕ್

**ಬೆಂಗಳೂರು:** ನಟಿ ರನ್ಯಾ ಪ್ರಕರಣ ಇದೀಗ ದೇಶದಾದ್ಯಂತ ಕುತೂಹಲ ಕೆರಳಿಸಿದ್ದು, ಈ ವೇಳೆಯೇ ಸ್ಯಾಂಡಲ್‌ವುಡ್‌ನ ಇನ್ನಿಬ್ಬರು ನಟಿಯರಿಗೆ ಸಂಕಷ್ಟ ಶುರುವಾಗಿದೆ. ಈ ಹಿಂದೆ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿ ಬಿದ್ದಿದ್ದ ಸಂಜನಾ ಗಲ್ರಾನಿ ಮತ್ತು ರಾಗಿಣಿ ದ್ವಿವೇದಿ ಎಫ್‌ಐಆರ್ ರದ್ದು ಪ್ರಶ್ನಿಸಿ ಸಿಸಿಬಿ ಸುಪ್ರೀಂ ಕೋರ್ಟ್‌ಗೆ ಅರ್ಜಿಸಲ್ಲಿಸಲಾಗುತ್ತಿದೆ. ಪುಟ 2

## ಲಂಚ ಪಡೆದ ಇಬ್ಬರು ಅಧಿಕಾರಿಗಳ ಬಂಧನ

**ಥಾಣೆ:** ಭ್ರಷ್ಟಾಚಾರ ನಿಗ್ರಹ ದಳ ಅಧಿಕಾರಿಗಳು ಸರ್ಕಾರಿ ಸ್ವಾಮ್ಯದ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಇಬ್ಬರು ಉದ್ಯೋಗಿಗಳನ್ನು ಲಂಚ ಪಡೆದ ಆರೋಪದ ಮೇಲೆ ಬಂಧಿಸಿದೆ. ಎಸಿಬಿಯ ಥಾಣೆ ಘಟಕಕ್ಕೆ ದೂರು ನೀಡಿದ ನಂತರ ನಡೆದ ಕಾರ್ಯಾಚರಣೆಯಲ್ಲಿ ಕಛೇರಿಯ ಹಿರಿಯ ಗುಮಾಸ್ತ ಹರೀಶ್ ಮರಾಠ (47) ಮತ್ತು ಕಿರಿಯ ಗುಮಾಸ್ತ ಹೇಮಂತ್ ಕಿರ್ಪಣ್ (39) ಅವರನ್ನು ಬಂಧಿಸಲಾಗಿದೆ.

## ಆಲ್ಕೋಹಾಲ್, ಕೃಷಿ ಉತ್ಪನ್ನಗಳ ಮೇಲೆ ಭಾರತ ಸಿಕ್ಕಾಪಟ್ಟೆ ಸುಂಕ

**ವಾಷಿಂಗ್ಟನ್:** ಅಮೆರಿಕ ಈಗ ನಿತ್ಯವೂ ಸುಂಕದ ತಗಾದೆ ತೆಗೆಯಲು ಆರಂಭಿಸಿದೆ. ಎಲ್ಲಾ ದೇಶಗಳು ಅಮೆರಿಕದ ಮುಕ್ತ ಮಾರುಕಟ್ಟೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂದು ಅಮೆರಿಕದ ಅಧ್ಯಕ್ಷರ ಗೃಹಕಚೇರಿಯಾದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲಿಯಾವಿಟ್ ಪುನರುಚ್ಚರಿಸಿದ್ದಾರೆ.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆನಡಾ, ಭಾರತ, ಜಪಾನ್ ಮೊದಲಾದ ದೇಶಗಳ ಹೆಸರನ್ನು ಪ್ರಸ್ತಾಪಿಸಿ, ಕುಟುಕಲು ಯತ್ನಿಸಿದರು. ಅಮೆರಿಕದ ಮದ್ಯ ಉತ್ಪನ್ನಗಳ ಮೇಲೆ ಭಾರತ ಶೇ. 150ರಷ್ಟು ಆಮದು ಸುಂಕ ಹಾಕುತ್ತದೆ. ಕೃಷಿ ಉತ್ಪನ್ನಗಳ ಮೇಲೆ ಶೇ. 100ರಷ್ಟು ಟ್ಯಾರಿಫ್ ಹಾಕುತ್ತದೆ ಎಂದು ವೈಟ್‌ಹೌಸ್ ಪ್ರೆಸ್ ಸೆಕ್ರೆಟರಿ ಆತಂಕ ವ್ಯಕ್ತಪಡಿಸಿದರು.

ಕೆರೋಲಿನ್ ಲಿಯಾವಿಟ್ ಅವರು ಕೆನಡಾ ವಿರುದ್ಧ ಹಾರಿಹಾಯ್ದರು. ದಶಕಗಳ ಕಾಲ ಸುಂಕಗಳ ಮೂಲಕ ಕೆನಡಾ ದೇಶವು ಅಮೆರಿಕ ಹಾಗೂ ಅದರ ನಾಗರಿಕರನ್ನು ಸುಲಿಗೆ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


'ಅಮೆರಿಕದ ಬೆಣ್ಣೆ ಮತ್ತು ಮೊಸರಿಗೆ ಕೆನಡಾ ಶೇ. 300ರಷ್ಟು ಸುಂಕ ಹಾಕುತ್ತದೆ. ಅಮೆರಿಕದ ಆಲ್ಕೋಹಾಲ್ ಮೇಲೆ ಭಾರತ ಶೇ. 150ರಷ್ಟು ತೆರಿಗೆ ಹಾಕುತ್ತದೆ. ಪುಟ 2

## ಸರ್ಕಾರದ ವಿರುದ್ಧ ರೆಡ್ಡಿ ವಾಗ್ದಾಳಿ



**ಬೆಂಗಳೂರು:** ಗ್ಯಾರಂಟಿ ಅನುಷ್ಠಾನ ಸಮಿತಿ ಮೂಲಕ ರಾಜ್ಯದ ತೆರಿಗೆ ಹಣವನ್ನ ಕಾಂಗ್ರೆಸ್ ಕಾರ್ಯಕರ್ತರಿಗೆ ಸರ್ಕಾರ ಹಂಚುತ್ತಿದೆ. ರಾಜ್ಯ ಇತಿಹಾಸದಲ್ಲೇ ಯಾವ ಪಕ್ಷವೂ ಇಂತಹ ನೀಚ ಕೆಲಸ ಮಾಡಿರಲಿಲ್ಲ ಎಂದು ಶಾಸಕ ಜನಾರ್ದನ ರೆಡ್ಡಿ ವಾಗ್ದಾಳಿ ನಡೆಸಿದರು. ಮಾಧ್ಯಮಗಳ ಜೊತೆ ಮಾತನಾಡಿದ ಶಾಸಕ ಜನಾರ್ಧನ ರೆಡ್ಡಿ, ಗ್ಯಾರಂಟಿ ಹೆಸರಲ್ಲಿ ದಲಿತರ ಅಭಿವೃದ್ಧಿ ಹಣ ದುರ್ಬಳಕೆ ಮಾಡಿದ್ದಾರೆ. ಗ್ಯಾರಂಟಿ ಅನುಷ್ಠಾನ ಸಮಿತಿ ಹೆಸರಲ್ಲಿ ಕಾಂಗ್ರೆಸ್ ಪುಟ 2

## ಚಿನ್ನ ಕಳ್ಳಸಾಗಣೆ ಪ್ರಕರಣ ಸೂಕ್ತ ತನಿಖೆಯಾಗಲಿ



**ಬೆಂಗಳೂರು :** ಚಿತ್ರನಟಿ ರನ್ಯಾರಾವ್ ಚಿನ್ನ ಕಳ್ಳಸಾಗಣೆ ಪ್ರಕರಣ ಸೂಕ್ತ ತನಿಖೆಯಾಗಲಿ. ಆ ಬಳಿಕವಷ್ಟೇ ಪ್ರಕರಣದ ಸತ್ಯಾಸತ್ಯತೆ ತಿಳಿಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ರನ್ಯಾರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಪ್ರಭಾವಿ ಸಚಿವರೊಬ್ಬರ ಕೈವಾಡವಿದೆ ಎಂಬ ಆರೋಪದ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಪ್ರಕರಣ ಸೂಕ್ತ ತನಿಖೆಯಾಗಲಿ, ಆಗ ಗೊತ್ತಾಗಲಿದೆ ಎಂದರು. ಗ್ಯಾರಂಟಿ ಸಮಿತಿಗಳ ವಿರುದ್ಧದ ಬಿಜೆಪಿ ಪ್ರತಿಭಟನೆ ಕುರಿತ ಪ್ರಶ್ನೆಗೆ, 2023ರಲ್ಲಿ ಸರ್ಕಾರ ರಚನೆಯಾದ ಬಳಿಕ ಗ್ಯಾರಂಟಿ ಯೋಜನೆಗಳನ್ನು ಪುಟ 2

## ಶಿಕ್ಷಣ, ವೈದ್ಯಕೀಯ ಕ್ಷೇತ್ರಕ್ಕೆ ವೀರಶೈವ ಮಠಮಾನ್ಯಗಳ ಕೊಡುಗೆ ಅನುಪಮ

**ಬೆಂಗಳೂರು** ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಮುಂಚೂಣಿ ಸಾಲಿನಲ್ಲಿದ್ದು, ಇದಕ್ಕೆ ವೀರಶೈವ, ಲಿಂಗಾಯತ ಮಠ ಮಾನ್ಯಗಳು ಹಾಗೂ ವಿವಿಧ ಸಂಘ, ಸಂಸ್ಥೆಗಳ ಕೊಡುಗೆ ಅಪಾರವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿದ್ದಗಂಗೆ ಮಠ, ಸುತ್ತೂರು ಸಂಸ್ಥಾನ, ಸಿರಿಗೆರೆ ಸೇರಿದಂತೆ ನಮ್ಮ ಸಮಾಜದ ಹಲವು ಮಠಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ಸಾವಿರಾರು ಪ್ರತಿಭಾವಂತರು ಇಂದು ದೇಶ, ವಿದೇಶಗಳಲ್ಲಿ ನಾಡಿಗೆ ಪುಟ 2



## ಸಿಎಂ ಸಿದ್ದು ಭೇಟಿ ಮಾಡಿದ ತಮಿಳುನಾಡು ಸಚಿವರ ನಿಯೋಗ



**ಬೆಂಗಳೂರು:** ತಮಿಳುನಾಡಿನ ಅರಣ್ಯ ಸಚಿವರಾದ ಡಾ.ಕೆ.ಪೊನ್ನುಮುಡಿ ಮತ್ತು ರಾಜ್ಯಸಭಾ ಸದಸ್ಯರಾದ ಮೊಹಮದ್ ಅಬ್ದುಲ್ಲಾ ಇಸ್ಮಾಯಿಲ್ ಅವರು ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಕೇಂದ್ರ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಮತ್ತು ದಕ್ಷಿಣ ರಾಜ್ಯಗಳ ವಿರೋಧಿ ನಿಲುವನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ಕುರಿತು ಚರ್ಚಿಸಿದರು. ಡಿಲಿಮಿಟೇಷನ್ ಮತ್ತಿತರ ಸಂಗತಿಗಳ ವಿಚಾರದಲ್ಲಿ ಧ್ವನಿ ಎತ್ತುವಂತೆ, ಪ್ರತಿಭಟನೆ ಜೊತೆಗೆ ನಿಲ್ಲುವಂತೆ ಚರ್ಚಿಸಿದರು.

ಇದಕ್ಕೂ ಮೊದಲು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರು ಪುಟ 2

## ರಾಜ್ಯಪಾಲರಿಗೆ ದೂರು

**ಮೊದಲ ಪುಟದಿಂದ**

ಬಿ.ವೈ. ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ. ಗ್ಯಾರಂಟಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಅಧ್ಯಕ್ಷರನ್ನು ನೇಮಿಸಿದ್ದು ಇದು ಸಂಪೂರ್ಣವಾಗಿ ರಾಜ್ಯದ ಕಾಂಗ್ರೆಸ್ ಸರಕಾರದ ಅಸಾಂವಿಧಾನಿಕ ನಡೆ ಎಂಬುದನ್ನು ಗೌರವಾನ್ವಿತ ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ ಎಂದು ತಿಳಿಸಿದರು.

ರಾಜ್ಯದ ಜನರ ತೆರಿಗೆ ಹಣದ ದುರುಪಯೋಗ ಆಗಿದೆ ಎಂದು ಮನದಟ್ಟು ಮಾಡಲಾಗಿದೆ ಎಂದರು. ಈ ಸರಕಾರಕ್ಕೆ ತಿಳಿಹೇಳುವ ಕೆಲಸ ಮಾಡುವಂತೆ ಹಾಗೂ ಮಧ್ಯಸ್ಥಿಕೆ ವಹಿಸಲು ಮನವಿ ಮಾಡಿದ್ದಾಗಿ ತಿಳಿಸಿದರು. ನನ್ನ ವಿಧಾನಸಭಾ ಕ್ಷೇತ್ರದಲ್ಲೇ ಜಿಲ್ಲಾ ಉಸ್ತುವಾರಿ ಸಚಿವರು, ಶಾಲೆ ಮತ್ತು ಕಾಲೇಜುಗಳ ಉಸ್ತುವಾರಿ ಸಮಿತಿಗಳಿಗೆ ಶಿಕಾರಿಪುರ ತಾಲ್ಲೂಕಿನ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ಕೊಟ್ಟ ಹೆಸರನ್ನು ಪರಿಗಣಿಸಲು ಸೂಚಿಸಿದ್ದಾರೆ. ಇಂಥ ಕೆಲಸ ಬೇರೆ ಕಡೆಯೂ ನಡೆಯುತ್ತಿದೆ. ಈ ಸಂಬಂಧ ಸದನದಲ್ಲಿ ಹಕ್ಕುಚ್ಯುತಿಯನ್ನು ಮಂಡಿಸಲಿದ್ದೇವೆ ಎಂದು ತಿಳಿಸಿದರು. ಸಚಿವರಿಂದ ಶಾಸಕರ ಹಕ್ಕು ಮೊಟಕುಗೊಳಿಸುವ ಕೆಲಸ ಆಗುತ್ತಿದೆ ಎಂದು ಟೀಕಿಸಿದರು.

**ಸರ್ಕಾರದಿಂದ ಯಾಕೆ ಕೊಡ್ತೀರಿ, ನಿಮ್ಮ ಜೇಬಿನಿಂದ ಹಣ ನೀಡಿ :** ಗ್ಯಾರಂಟಿ ಅನುಷ್ಠಾನ ಸಮಿತಿಯ ಕಾಂಗ್ರೆಸ್ ಕಾರ್ಯಕರ್ತರಿಗೆ ಸರ್ಕಾರಿ ಸಂಬಳ ಪಡೆಯುವ ಹಕ್ಕಿದೆ ಎಂದು ಹೇಳಿಕೆ ನೀಡಿದ ಡಿಸಿಎಂ ಡಿಕೆ ಶಿವಕುಮಾರ್ ವಿರುದ್ಧ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ ರವಿ ವಾಗ್ದಾಳಿ ನಡೆಸಿದ್ದಾರೆ.

ಸಂಘ ಸಂಸ್ಥೆಗಳಿಗೆ ಅನುದಾನ ಕೊಡಲು ಹಣ ಇಲ್ಲಅಂತಾರೆ, ಗುತ್ತಿಗೆದಾರರು, ಹಾಲು ಉತ್ಪಾದಕರ ಹಣ ಬಾಕಿ ಉಳಿಸಿಕೊಂಡಿದ್ದಾರೆ. ಅತಿಥಿ ಶಿಕ್ಷಕರಿಗೆ ಗೌರವ ಧನ ನೀಡಲು ಹಣವಿಲ್ಲ ಅಂತಾರೆ. ಅಂಗನವಾಡಿ ಕಾರ್ಯಕರ್ತರಿಗೆ ಸಹಾಯಕಿಯರಿಗೆ ಹಣ ನೀಡಿಲ್ಲ. ಆದರೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಡಲು ಮಾತ್ರ ಹಣ ಇದೆ. ಕಾಂಗ್ರೆಸ್ ಕಾರ್ಯಕರ್ತರನ್ನು ಮೆರೆಸುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಜನರ ತೆರಿಗೆ ಹಣದಲ್ಲಿ ಮೋಸು ಮಸ್ತಿ ಮಾಡಿಸುತ್ತಿದ್ದಾರೆ. ನಿಮ್ಮ ಕಾರ್ಯಕರ್ತರಿಗೆ ನಿಮ್ಮ ಜೇಬಿನಿಂದ ಹಣ ಕೊಡಿ ಸರ್ಕಾರದ ಹಣ ಯಾಕೆ ಕೊಡ್ತೀರಿ. ಜನರ ಹಣವನ್ನ ಕಾಂಗ್ರೆಸ್ ಲೂಟಿ ಮಾಡುತ್ತಿದೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಸಿಟಿ ರವಿ ಕೆಂಡಕಾರಿದರು.

**ವಿವಿ ಬದಲು ಕಾಂಗ್ರೆಸ್ ಅನ್ನೇ ಮುಚ್ಚುಬಿಡಿ:** ಇದೇ ವೇಳೆ ಮಾತನಾಡಿದ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಕಾಂಗ್ರೆಸ್ ಇರುವವರೆಗೂ ದೇಶ, ರಾಜ್ಯ ಅಭಿವೃದ್ಧಿ ಆಗಲ್ಲ. ಮಾನ ಮರ್ಯಾದೆ ಇದ್ರೆ ವಿವಿ ಬದಲು ಕಾಂಗ್ರೆಸ್ ಮುಚ್ಚಿಬಿಡಿ. ಕಾಂಗ್ರೆಸ್ ಮುಚ್ಚಿದರೇ ಏನು ಆಗಲ್ಲ ಕಾಂಗ್ರೆಸ್ ಮುಚ್ಚುಬಿಟ್ಟರೇ ಎಲ್ಲರೂ ಸಹ ಆರಾಮವಾಗಿ ಇರ್ತಾರೆ ಎಂದು ವಾಗ್ದಾಳಿ ನಡೆಸಿದರು.





ಮಾಗಡಿ ತಾಲೂಕು ಸೋಲೂರಿನ ಶ್ರೀ ಶನೈಶ್ವರ ಕ್ಷೇತ್ರ ಪಾಲನಹಳ್ಳಿ ಮಠದ ಶ್ರೀ ಸಿದ್ದರಾಜು ಸ್ವಾಮೀಜಿ ಅವರು, ಕೆಪಿಸಿಸಿ ಅಧ್ಯಕ್ಷರಾಗಿ ಐದು ವರ್ಷ ಪೂರೈಸುತ್ತಿರುವ ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಬುಧವಾರ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

# ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವ ಕಾರ್ಯಕ್ಕೆ ಚುರುಕು

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಗುರುತಿಸುವ ಸಮೀಕ್ಷಾ ಕಾರ್ಯ ನಡೆಸಲಾಗುತ್ತಿದ್ದು, ಇದುವರೆಗೆ 1,08,203 ಮಕ್ಕಳ ಪೈಕಿ ಶಾಲೆಯಿಂದ ಹೊರಗುಳಿದ 6,936 ಮಕ್ಕಳನ್ನು ಗುರುತಿಸಲಾಗಿದೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತರಾದ ಪ್ರೀತಿ ಗೆಹ್ಲೋಟ್ ರವರು ತಿಳಿಸಿದರು.

ಬಿಬಿಎಂಪಿಯ ಎಂಟೂ ವಲಯಗಳ ಜಂಟಿ ಆಯುಕ್ತರನ್ನು ಶಾಲೆಯಿಂದ ಹೊರಗುಳಿದ ಮಕ್ಕಳ ಗುರುತಿಸುವ ಸಮೀಕ್ಷಾ ಕಾರ್ಯಕ್ಕೆ ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿದೆ. ಅದರಂತೆ ಎಲ್ಲಾ ವಲಯಗಳಲ್ಲಿ ವಾರ್ಡ್ ವಾರು ಸಿಬ್ಬಂದಿಗಳನ್ನು ನಿಯೋಜಿಸಿ ಸಮೀಕ್ಷಾ ಕಾರ್ಯವನ್ನು ನಡೆಸಲಾಗುತ್ತಿದೆ.

ಸಂವಿಧಾನದ ಕಲಂ21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಕಾಲ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು 'ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳು, 2012' ರನ್ವಯ ಸ್ಥಳೀಯ ಸಂಸ್ಥೆಗಳು ಶಿಕ್ಷಣ ರಿಜಿಸ್ಟರ್ ಅನ್ನು ನಿರ್ವಹಿಸಬೇಕಾಗಿರುತ್ತದೆ.

ಮುಂದುವರಿದು, 'ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು(ತಿದ್ದುಪಡಿ) ನಿಯಮಗಳು, 2014' ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳು ಶಾಲೆಗೆ ದಾಖಲಾಗದ ಮಕ್ಕಳ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ



ವಿಚಾರಣಾ ಪ್ರಕ್ರಿಯೆ ಚಾಲನೆಯಲ್ಲಿದೆ. ಈ ಸಂಬಂಧ, ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನದಂತೆ ಪಾಲಿಕೆ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ನಿಖರ ಸಂಖ್ಯೆಯನ್ನು ಗುರುತಿಸುವ ಕಾರ್ಯ ಪ್ರಕ್ರಿಯೆಯಲ್ಲಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಗುರುತಿಸುವಿಕೆ ಸಮೀಕ್ಷೆ ಕಾರ್ಯವನ್ನು, ಸೆಂಟರ್ ಫಾರ್ ಇ-ಗವರ್ನೆನ್ಸ್ ಇಲಾಖೆ ವತಿಯಿಂದ 'ಕರ್ನಾಟಕ ಸರ್ಕಾರ ಆಪ್ ತಾಣ'ದಲ್ಲಿರುವ 'ಕರ್ನಾಟಕ ಹೆಚ್2ಹೆಚ್ ಮಕ್ಕಳ ಸಮೀಕ್ಷೆ ಅಪ್ಲಿಕೇಶನ್' (ಏಚಿಡಿಟಿಚಿಣಚಿಞಚಿ ಊ2ಊ ಜುಟಜಡಿಜಟ ಖಣಡಿತಜಥಿ ೦೮೮) ಎಂಬ ಮೊಬೈಲ್ ಆಪ್ ಮೂಲಕ ಸಮೀಕ್ಷೆ ನಡೆಸಲಾಗುತ್ತಿದೆ.

**24ನೇ ಫೆಬ್ರುರಿ 2025 ರಿಂದ ಸಮೀಕ್ಷೆ ಆರಂಭ:** ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವಂತಹ ಎಲ್ಲಾ ಮನೆಗಳನ್ನು ಉಚ್ಚ ನ್ಯಾಯಾಲಯದ ನಿರ್ದೇಶನದಂತೆ 24ನೇ ಫೆಬ್ರುರಿ 2025ರಿಂದ ಪಾಲಿಕೆಯ ಎಂಟು ವಲಯಗಳಲ್ಲಿ ಶಿಕ್ಷಣ ವಿಭಾಗದ ಹೊಲಿಗೆ ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಲಿಂಕ್ ವರ್ಕರ್ಸ್ ಗಳ ಮೂಲಕ ಮನೆ ಮನೆ ಸಮೀಕ್ಷೆ ನಡೆಸಲಾಗುತ್ತಿದೆ. ಪ್ರತಿ ವಾರ್ಡ್ ಗೆ ಸುಮಾರು 10 ಗಣತಿದಾರರನ್ನು ನೇಮಿಸಲಾಗಿದ್ದು, ಸದರಿ ಗಣತಿದಾರರು ಪ್ರತಿಯೊಂದು ಮನೆಗೆ ಭೇಟಿ ನೀಡಿ 6 ರಿಂದ 18 ವರ್ಷದ ವಯಸ್ಸಿನ ಎಲ್ಲರನ್ನೂ ಸಮೀಕ್ಷೆ ನಡೆಸಿ ಆಪ್ ನಲ್ಲಿ ಮಾಹಿತಿ ದಾಖಲಿಸಲಾಗುತ್ತಿದೆ.

**ಶಾಲೆಯಿಂದ ಹೊರಗುಳಿದ 6,936 ಮಕ್ಕಳ ಗುರುತು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ 8 ವಲಯಗಳಲ್ಲಿಯೂ ಶಾಲೆಯಿಂದ ಹೊರಗುಳಿದ ಮಕ್ಕಳ ಗುರುತಿಸುವಿಕೆ ಸಮೀಕ್ಷಾ ಕಾರ್ಯ ಸಕ್ರಿಯವಾಗಿ ನಡೆಯುತ್ತಿದೆ. ಪಾಲಿಕೆಯ 8 ವಲಯಗಳಲ್ಲಿ 10ನೇ ಮಾರ್ಚ್ 2025 ರವರೆಗೆ 1,08,203 ಮಕ್ಕಳ ಪೈಕಿ, ಶಾಲೆಯಿಂದ ಹೊರಗುಳಿದ 6,936 ಮಕ್ಕಳನ್ನು ಗುರುತಿಸಲಾಗಿದೆ. ಶೀಘ್ರ ಎಲ್ಲಾ ಮನೆ-ಮನೆ ಭೇಟಿ ನೀಡಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಈ ಸಮೀಕ್ಷಾ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸಲು ಕೋರಿದೆ.

# ಹಿರಿಯ ಚಿತ್ರ ಕಲಾವಿದೆ ಸುಧಾ ಮನೋಹರ್ ಸೇರಿ ಇಬ್ಬರಿಗೆ 'ಪಿಆರ್ ಟಿ ಕಲಾ ಪ್ರಶಸ್ತಿ'

**ಮೈಸೂರು:** ಪಿಆರ್ ತಿಪ್ಪೇಸ್ವಾಮಿ ಪ್ರತಿಷ್ಠಾನ ವತಿಯಿಂದ ಕೊಡ ಮಾಡುವ ಪಿಆರ್ ಟಿ ಕಲಾ ಪ್ರಶಸ್ತಿಗೆ ಬೆಂಗಳೂರಿನ ಹಿರಿಯ ಚಿತ್ರ ಕಲಾವಿದೆ ಸುಧಾ ಮನೋಹರ್ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಮುಖವೀಣೆ ಅಂಜನಪ್ಪ ಅವರನ್ನ ಆಯ್ಕೆ ಮಾಡಲಾಗಿದೆ ಎಂದು ಪಿ.ಆರ್.ತಿಪ್ಪೇಸ್ವಾಮಿ ಟ್ರಸ್ಟ್‌ನ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರಿನ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಮಾಹಿತಿ ನೀಡಿದ ರಾಜಶೇಖರ ಕದಂಬ ಅವರು, ಹಿರಿಯ ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಅವರ ನೆನಪಿನ ಅಂಗವಾಗಿ ಪ್ರತಿ ವರ್ಷದಂತೆ ಮೈಸೂರಿನಲ್ಲಿ "ಪಿ.ಆರ್.ತಿಪ್ಪೇಸ್ವಾಮಿ ಕಲಾಸಂಭ್ರಮ-2025 ಮತ್ತು ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಬಾರಿ ಬೆಂಗಳೂರಿನ ಹಿರಿಯ ಚಿತ್ರ ಕಲಾವಿದೆ ಸುಧಾ ಮನೋಹರ್ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಮುಖವೀಣೆ ಅಂಜನಪ್ಪ ಇವರನ್ನು ಪಿಆರ್‌ಟಿ ಕಲಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರತಿ ವರ್ಷ ಚಿತ್ರಕಲೆ ಮತ್ತು ಜಾನಪದ ಕಲೆಗೆ ಪಿಆರ್ ಟಿ ಕಲಾ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದು, ತಲಾ 25.000/-ನಗದು, ಪ್ರಶಸ್ತಿಪತ್ರ, ಪ್ರಶಸ್ತಿ ಫಲಕ, ಹಾಗೂ ಫಲತಾಂಬೂಲ ನೀಡಿ ಗೌರವಿಸಲಾಗುವುದು.

ಮುಂದಿನ ತಿಂಗಳು ನಡೆಯುವ "ಪಿ.ಆರ್.ತಿಪ್ಪೇಸ್ವಾಮಿ ಕಲಾಸಂಭ್ರಮ-2025 ಮತ್ತು ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ" ಕಾರ್ಯಕ್ರಮದಲ್ಲಿ ಇವರಿಬ್ಬರಿಗೂ ಪಿಆರ್‌ಟಿ ಕಲಾಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದರು.





ಹಾಗೆಯೇ ಸುಧಾ ಮನೋಹರ್ ರವರು ಮೂಲತಃ ಧಾರಾವಾಡದವರು. ಬೆಂಗಳೂರಿನ ಪ್ರತಿಷ್ಠಿತ ಕಲಾ ಕಾಲೇಜು ಚಿತ್ರಕಲಾ ಪರಿಷತ್‌ನಲ್ಲಿ ಹಾಗೂ ಸ್ವಿಜಲ್ಯಾರ್ಂಡ್‌ನಲ್ಲಿ ಕಲಾಶಿಕ್ಷಣ ಮುಗಿಸಿ, ನಂತರ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ, ಆಡಳಿತ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕದ ಕಲಾವಲಯದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದು ಜೀವಮಾನದ ಕಲಾಶಿಕ್ಷಕಿ ಪ್ರಶಸ್ತಿ, ಮೈಸೂರು ದಸರಾ ಕಲಾ ಪ್ರಶಸ್ತಿ, ಆಲ್ ಇಂಡಿಯಾ ಆರ್ಟಿಸ್ಟ್ ಎಕ್ಸಿಬಿಷನ್‌ನಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ ಎಂದು ರಾಜಶೇಖರ ಕದಂಬ ತಿಳಿಸಿದರು.

ಇನ್ನು ಮುಖವೀಣೆ ಅಂಜನಪ್ಪನವರು ಚಿಕ್ಕಬಳ್ಳಪುರದ ದಪ್ಪರ್ತಿ ಗ್ರಾಮದವರು. ಜನಪದ ಕಲಾಪ್ರಕಾರದ ಮುಖವೀಣೆ ವಾದನವನ್ನು ಶಾಸ್ತ್ರೀಯವಾಗಿ ನುಡಿಸುವ ಮೂಲಕ ಜಾನಪದ ಹಿನ್ನಲೆಯ ವಾದ್ಯಕ್ಕೆ ವಿಶೇಷ ಸ್ಥಾನ ಕಲ್ಪಿಸಿಕೊಟ್ಟವರು. ರಂಗಗೀತೆ, ಬಯಲಾಟ, ಚಲನಚಿತ್ರ ಗೀತೆಗಳನ್ನು ಸುಲಲಿತವಾಗಿ ನುಡಿಸಬಲ್ಲವರಾಗಿದ್ದು, ಏಕಕಾಲದಲ್ಲಿ ಐದು ವಾದನಗಳನ್ನು ನುಡಿಸಿ ನೋಡಗರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ. ಜಾನಪದ ಅಕಾಡಮಿಯ ಕಲಾಪ್ರಶಸ್ತಿ, ಜನಪದ ಶ್ರೀ ಕಲಾಪ್ರಶಸ್ತಿ, ಲಭಿಸಿದೆ. ನೂರಾರು ಸಂಘ ಸಂಸ್ಥೆಗಳು ಆಹ್ವಾನಿಸಿ ಗೌರವಿಸಿವೆ. ಈ ಇಳಿ ವಯಸ್ಸಿನಲ್ಲಿಯು ಕಲೆಯನ್ನು ನಿರಂತರವಾಗಿ ಮೈಗೂಡಿಸಿಕೊಂಡಿದ್ದಾರೆ ಎಂದು ರಾಜಶೇಖರ ಕದಂಬ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಪಿ.ಆರ್.ತಿಪ್ಪೇಸ್ವಾಮಿ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ ಮಹದೇವಶೆಟ್ಟಿ ಹಾಗೂ ನಿರ್ದೇಶಕ ಹೆಚ್ ಆರ್ ಚಂದ್ರಶೇಖರಯ್ಯ ಹಾಗೂ ಮೈಲಹಳ್ಳಿ ರೇವಣ್ಣಉಪಸ್ಥಿತರಿದ್ದರು.

**ಮೊದಲ ಪುಟದಿಂದ**

## ಪ್ರಾಥಮಿಕ ಶಾಲೆ ಮುಚ್ಚಿಲ್ಲ

ಹತ್ತಿರದ ಸಂಸ್ಥೆಗಳೊಂದಿಗೆ ವಿಲೀನಗೊಳಿಸಲಾಗಿಲ್ಲ ಮತ್ತು ಭವಿಷ್ಯದ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತವೆ. ಕಡಿಮೆ ದಾಖಲಾತಿಯನ್ನು ಪರಿಹರಿಸಲು, ಸರ್ಕಾರವು ಪ್ರತಿ ಮೇ ತಿಂಗಳಲ್ಲಿ ವಿಶೇಷ ಯೋಜನೆಗಳನ್ನು ಮತ್ತು ಜೂನ್‌ನಲ್ಲಿ ಸಾಮಾನ್ಯ ದಾಖಲಾತಿ ಅಭಿಯಾನಗಳನ್ನು ನಡೆಸುತ್ತದೆ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿ ಪ್ರಸ್ತುತ 21,045 ಪ್ರಾಥಮಿಕ ಶಾಲೆಗಳು 1 ರಿಂದ 5 ನೇ ತರಗತಿಗಳು, 22,086 ಹಿರಿಯ ಪ್ರಾಥಮಿಕ ಶಾಲೆಗಳು 1 ರಿಂದ 8 ನೇ ತರಗತಿಗಳು ಮತ್ತು 5,051 ಪ್ರೌಢಶಾಲೆಗಳು ಸೇರಿದಂತೆ ಸುಮಾರು 49,679 ಸರ್ಕಾರಿ ಶಾಲೆಗಳಿವೆ ಎಂದು ತಿಳಿಸಿದ್ದಾರೆ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ, ಶೂ ಮತ್ತು ಸಾಕ್ಸ್, ಹೆಚ್ಚುವರಿಯಾಗಿ ಮಧ್ಯಾಹ್ನದ ಊಟದ ಯೋಜನೆಯು ದಾಖಲಾತಿಯನ್ನು ಉತ್ತೇಜಿಸಲು ವಿದ್ಯಾರ್ಥಿಗಳಿಗೆ ಮೊಟ್ಟೆ ಅಥವಾ ಬಾಳೆಹಣ್ಣುಗಳ ಜೊತೆಗೆ ಮಧ್ಯಾಹ್ನದ ಊಟವನ್ನು ಒದಗಿಸಲಾಗುತ್ತಿದೆ ಎಂದಿದ್ದಾರೆ.

## ಸ್ನೇಹಮಯಿ ಕೇಂದ್ರಕ್ಕೆ ದೂರು

ಭ್ರಷ್ಟರಿಗೆ ಅರ್ಪಣೆ ಮಾಡಿರುತ್ತಾರೆಯೆ?ಇಂತಹವರಿಂದ ಭ್ರಷ್ಟಚಾರ, ಅಕ್ರಮ, ಅನ್ಯಾಯಗಳನ್ನು ತಡೆಯಲು ಸಾಧ್ಯವೆ? ಇಂತಹ ಅಧಿಕಾರಿಗಳು ಐ.ಪಿ.ಎಸ್.ಅಧಿಕಾರಿಗಳಾಗಿ ಮುಂದುವರೆಯುವುದು ಸೂಕ್ತವೆ? ಎಂಬುದನ್ನು ಖಚಿತಪಡಿಸಿಕೊಂಡು ಇವರುಗಳ ವಿರುದ್ದ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ದೂರು ನೀಡಿದ್ದಾರೆ.

## ರೆಡ್ಡಿ ವಾಗ್ದಾಳಿ

ಕಾರ್ಯಕರ್ತರಿಗೆ ಹಣ ಹಂಚಿಕೆ ಮಾಡುತ್ತಿದ್ದಾರೆ ರಾಜ್ಯದ ತೆರಿಗೆ ಹಣವನ್ನ ಹಂಚುತ್ತಿದೆ ಇತಿಹಾಸದಲ್ಲೇ ಯಾಪಕ್ಷವೂ ಇಂತಹ ನೀಚ ಕೆಲಸ ಮಾಡಿರಲಿಲ್ಲ ಎಂದು ಕಿಡಿಕಾರಿದರು. ಇದರ ಫಲವನ್ನು ಕಾಂಗ್ರೆಸ್ ಅನುಭವಿಸುತ್ತದೆ. ಈಗ ಕೊಡುತ್ತಿರುವ ಗ್ಯಾರಂಟಿ ಜೊತೆ ಇನ್ನೂ 5 ಗ್ಯಾರಂಟಿ ಸೇರಿಸಿ ತೊಂದರೆ ಇಲ್ಲ. ಆದರೆ ಜನರ ಸರ್ಕಾರದ ತೆರಿಗೆ ಹಣವನ್ನ ಕಾಂಗ್ರೆಸ್ ಕಾರ್ಯಕರ್ತರಿಗೆ ನೀಡಲು ಆಕ್ಷೇಪವಿದೆ. ಗ್ಯಾರಂಟಿ ಅನುಷ್ಠಾನ ಸಮಿತಿಯ ಕಾಂಗ್ರೆಸ್ ಕಾರ್ಯಕರ್ತರಿಗೆ ನಿಮ್ಮ ಪಕ್ಷದ ಹಣ ನೀಡಿ, ಅದನ್ನ ಬಿಟ್ಟು ಸರ್ಕಾರದ ತೆರಿಗೆ ಹಣ ಯಾಕೆ ಕೊಡುತ್ತೀರಿ ಎಂದು ಶಾಸಕ ಜನಾರ್ದನ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

## ಸೂಕ್ತ ತನಿಖೆಯಾಗಲಿ

ಜಾರಿಗೆ ತರಲಾಗಿದೆ. ಬಳಿಕ ಸೂಕ್ತ ರೀತಿಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ದೃಷ್ಟಿಯಿಂದ ಗ್ಯಾರಂಟಿ ಸಮಿತಿಗಳನ್ನು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ರಚಿಸಲಾಯಿತು. ಈಗ ಸಮಿತಿಗಳನ್ನು ರದ್ದುಗೊಳಿಸುವಂತೆ ಪ್ರತಿಪಕ್ಷಗಳು ನಡೆಸುತ್ತಿರುವ ಹೋರಾಟಕ್ಕೆ ಅರ್ಥವಿಲ್ಲ ಎಂದು ಹೇಳಿದರು.

ನಮ್ಮ ಯೋಜನೆಗಳನ್ನೇ ಬಿಜೆಪಿ ಇತರ ರಾಜ್ಯಗಳಲ್ಲಿ ಜಾರಿಗೆ ತಂದಿದೆ. ಮಹಾರಾಷ್ಟ್ರ ಸರ್ಕಾರ ನಮ್ಮದೇ ಗೃಹಲಕ್ಷ್ಮೀ ಯೋಜನೆಯನ್ನು ಲಾಡ್ಲಿ ಬೆಹೆನಾ ಹೆಸರಿನಲ್ಲಿ ಚುನಾವಣೆಗೂ ಮುನ್ನ ಎರಡು ತಿಂಗಳು ಹಣ ನೀಡಿತ್ತು. ಆದರೆ, ಚುನಾವಣೆಯಲ್ಲಿ ಗೆದ್ದ ಬಳಿಕ ಈ ಯೋಜನೆಯನ್ನೇ ಬಂದ್ ಮಾಡಲಾಗಿದೆ. ಇದು ಬಿಜೆಪಿ ಸರ್ಕಾರಗಳ ಸ್ಥಿತಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ವ್ಯಂಗ್ಯವಾಡಿದರು.

ಮಹಾರಾಷ್ಟ್ರ ಸರ್ಕಾರದ ಸಚಿವರಿಗೆ ಆರ್‌ಎಸ್‌ಎಸ್ ಕಾರ್ಯಕರ್ತರು ಸಹಾಯಕರಾಗಿದ್ದಾರೆ. ಅವರಿಗೆ ಅಲ್ಲಿನ ಸರ್ಕಾರ ಸಂಬಳ ನೀಡುತ್ತಿದೆ. ಅವರಲ್ಲೇ ತಪ್ಪು ಇಟ್ಟುಕೊಂಡು ನಮ್ಮ ಕಡೆ ಬೆಟ್ಟು ಮಾಡಿ ತೋರಿಸುತ್ತಿದ್ದಾರೆ ಎಂದು ಸಚಿವರು ದೂರಿದರು.

ಆಲ್ಕೋಹಾಲ್, ಕೃಷಿ ಉತ್ಪನ್ನಗಳ ಮೇಲೆ ಭಾರತ ಸಿಕ್ಕಾಪಟ್ಟೆ ಸುಂಕ ಕುಂಟುಕಿ ಬೋರ್ಬೋನ್ ಅನ್ನು ಭಾರತಕ್ಕೆ ರಫ್ತು ಮಾಡಲು ಸಾಧ್ಯವಾಗುತ್ತಿರಬಹುದು ಎಂದು ಭಾವಿಸಿದ್ದೀರಾ? ಅದು ಅಸಾಧ್ಯ. ಭಾರತವು ಕೃಷಿ ಉತ್ಪನ್ನಗಳ ಮೇಲೆ ಶೇ. 100ರಷ್ಟು ಆಮದು ಸುಂಕ ಹಾಕುತ್ತದೆ' ಎಂದು ಅಮೆರಿಕ ಅಧ್ಯಕ್ಷರ ಮಾಧ್ಯಮ ಕಾರ್ಯದರ್ಶಿ ಹೇಳಿದರು.

**ಯಾರಿಗೂ ಒಳಿತಾಗದ ಆಮದು ಸುಂಕ :** ಯೂರೋಪ್ ನಾಯಕರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಮದು ಸುಂಕ ನೀತಿಗೆ ವಿಷಾದಿಸಿದ್ದಾರೆ. 'ಆಮದು ಸುಂಕ ಎನ್ನುವುದು ತೆರಿಗೆಯೇ. ಇದರಿಂದ ವ್ಯಾಪಾರಕ್ಕೆ ಕಷ್ಟವಾಗುತ್ತದೆ. ಗ್ರಾಹಕರಿಗೂ ಕಷ್ಟವಾಗುತ್ತದೆ. ಈ ಟ್ಯಾರಿಫ್‌ಗಳು ಸಪ್ಲೈ ಚೈನ್‌ಗಳನ್ನು ದುರ್ಬಲಗೊಳಿಸುತ್ತಿವೆ. ಆರ್ಥಿಕತೆಗೆ ಅನಿಶ್ಚಿತ ಪರಿಸ್ಥಿತಿ ತರುತ್ತಿವೆ. ತೆರಿಗೆಯಿಂದ ಅಮೆರಿಕದ ಫ್ಯಾಕ್ಟರಿ ಉದ್ಯೋಗಗಳನ್ನು ಸೃಷ್ಟಿಸಬಹುದು ಎನ್ನುತ್ತಾರೆ. ಆದರೆ, ಕೆಲಸಗಳೇ ಹೋಗಬಹುದು. ಬೆಲೆಗಳು ಹೆಚ್ಚುತ್ತವೆ' ಎಂದು ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ವೋನ್ ಡರ್ ಲೆಯೆನ್ ಅಭಿಪ್ರಾಯಪಟ್ಟರು.

## ತ.ನಾಡು ಸಚಿವರ ನಿಯೋಗ

ದೂರವಾಣಿ ಮೂಲಕ ಮುಖ್ಯಮಂತ್ರಿಗಳ ಜೊತೆ ಇದೇ ವಿಚಾರಗಳ ಬಗ್ಗೆ ಚರ್ಚಿಸಿದರು. ತಮಿಳುನಾಡು ಸರ್ಕಾರದ ನಿಯೋಗ ಮತ್ತು ಮುಖ್ಯಮಂತ್ರಿ ಸ್ಟಾಲಿನ್ ಅವರ ಜೊತೆಗೆ ಚರ್ಚಿಸುವ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಕ್ಷಿಣ ರಾಜ್ಯಗಳ ಪ್ರತಿರೋಧಕ್ಕೆ ತಮ್ಮದೂ ಬೆಂಬಲ ಸೂಚಿಸಿದರು. ಕರ್ನಾಟಕದ ಹಿತಾಸಕ್ತಿಗೆ ವಿರುದ್ಧವಾದ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ, ಸಂವಿಧಾನದ ಒಕ್ಕೂಟ ತತ್ವಕ್ಕೆ ವಿರುದ್ಧವಾದ ಕೇಂದ್ರ ಸರ್ಕಾರದ ಎಲ್ಲಾ ನಡೆಗಳನ್ನೂ ತಾವು ಮುಲಾಜಿಲ್ಲದೆ ಖಂಡಿಸುತ್ತೇವೆ. ಈ ವಿಚಾರದಲ್ಲಿ ಹೋರಾಟಕ್ಕೂ ಬೆಂಬಲ ನೀಡುತ್ತೇವೆ ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

## ನಟಿಯರಿಗೆ ಸಿಸಿಬಿ ಶಾಕ್

ಸಂಬಂಧಿಸಿದಂತೆ ನಟಿಯರಾದ ರಾಗಿಣಿ ದ್ವಿವೇದಿ ಮತ್ತು ಸಂಜನಾ ಗಲ್ರಾನಿಯನ್ನು ಪೊಲೀಸರು ಬಂಧಿಸಿದ್ದರು. ನಟಿಯರು ತಮ್ಮ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದು ಕೋರಿ ಅರ್ಜಿ ಹಾಕಿದ್ದರು. ಅಲ್ಲದೆ ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ರಾಗಿಣಿ ವಿರುದ್ಧ ಪ್ರಕರಣವನ್ನು ಸಾಕ್ಷ್ಯಗಳ ಕೊರತೆಯಿಂದಾಗಿ ರದ್ದು ಮಾಡಿತ್ತು. ಸಂಜನಾ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಸಹ ರದ್ದಾಗಿತ್ತು.

ಇದೀಗ ಸಿಸಿಬಿಯು ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಿದೆ. ಗೃಹ ಇಲಾಖೆ ಮತ್ತು ಕಾನೂನು ಇಲಾಖೆಯ ಸಮ್ಮತಿ ಮೇರೆಗೆ ಇಬ್ಬರು ನಟಿಯರ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. ಈ ಹಿಂದೆ ದರ್ಶನ್ ಪ್ರಕರಣದಲ್ಲಿಯೂ ಸಹ ರಾಜ್ಯ ಪೊಲೀಸರು ಹೈಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರು. ಆದರೆ ಅದರಿಂದ ಹೆಚ್ಚಿನ ಉಪಯೋಗವೇನೂ ಆದಂತಿಲ್ಲ. ಇದೀಗ ಐದು ವರ್ಷ ಹಳೆಯ ಪ್ರಕರಣದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ.

ನಟಿ ರಾಗಿಣಿ ಹಾಗೂ ಸಂಜನಾ ಗಲ್ರಾನಿ ಅವರು ಮಾದಕ ವಸ್ತು ಸರಬರಾಜಿಗೆ ಸಹಕಾರ ನೀಡಿದ್ದಾರೆ. ಮಾದಕ ವಸ್ತು ಸೇವನೆ ಮಾಡಿದ್ದಾರೆ ಎಂದು ಆರೋಪಿಸಿ ಅವರನ್ನು ಬಂಧಿಸಲಾಗಿತ್ತು. ರಾಗಿಣಿ, ಸಂಜನಾ ಜೊತೆಗೆ ಇನ್ನೂ ಕೆಲವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಅದೇ ಸಮಯದಲ್ಲಿ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ನಟ, ನಟಿಯರನ್ನು ಕರೆಸಿ ವಿಚಾರಣೆ ನಡೆಸಲಾಗಿತ್ತು. ಲೂಸ್ ಮಾದ ಯೋಗಿ, ದಿಗಂತ್ ಸೇರಿದಂತೆ ಇನ್ನೂ ಹಲವರನ್ನು ಕರೆಸಿ ವಿಚಾರಣೆ ನಡೆಸಿದ್ದರು.

## ಇಬ್ಬರು ಅಧಿಕಾರಿಗಳ ಬಂಧನ

ಬಂಧಿಸಲಾಗಿದೆ. ದೂರುದಾರರ ತಾಯಿಯ ವೈದ್ಯಕೀಯ ಬಿಲ್‌ಗಳನ್ನು ಪಾವತಿಸಲು ಇಬ್ಬರೂ ಲಂಚ ಕೇಳಿದ್ದರು ಲಂಚದ ಮೊತ್ತವನ್ನು ಸ್ವೀಕರಿಸುತ್ತಿದ್ದಾಗ ಕಿರ್ಪಾಣ್ ಅವರನ್ನು ರೆಡ್ ಹ್ಯಾಂಡ್ ಆಗಿ ಹಿಡಿಯಲಾಯಿತು. ಎಂದು ಎಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅವರು ಆರಂಭದಲ್ಲಿ 23,000 ರೂ.ಗಳಿಗೆ ಬೇಡಿಕೆ ಇಟ್ಟರು, ಆದರೆ ನಂತರ 15,000 ರೂ.ಗಳನ್ನು ಸ್ವೀಕರಿಸಲು ಒಪ್ಪಿಕೊಂಡರು ಎಂದು ದೂರುದಾರರು ಆರೋಪಿಸಿದ್ದಾರೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಮತ್ತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

## 'ಡೆವಿಲ್' ಚಿತ್ರೀಕರಣ

ಚಿತ್ರೀಕರಣಕ್ಕೆ ಕಾನೂನು ಸುವ್ಯವಸ್ಥೆ ಡಿಸಿಪಿ ಮುತ್ತುರಾಜ್ ಅವರು ಅನುಮತಿ ನೀಡಿದ್ದಾರೆ. ಹೀಗಾಗಿ ಇಂದಿನಿಂದ ಮಾರ್ಚ್ 14 ರವರೆಗೆ ಸರ್ಕಾರಿ ಅತಿಥಿ ಗೃಹದಲ್ಲಿ ಚಿತ್ರೀಕರಣ ನಡೆಯಲಿದೆ. ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಶೂಟಿಂಗ್ ಮಾಡಲು ಚಿತ್ರತಂಡ ತೀರ್ಮಾನ ಮಾಡಿದೆ.

ನಂತರ ಮಾರ್ಚ್ 15ರಂದು ಲಲಿತಮಹಲ್ ನಲ್ಲಿ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 9 ಗಂಟೆವರೆಗೂ ಚಿತ್ರೀಕರಣ ಮಾಡಲು ಪ್ಲ್ಯಾನ್ ರೂಪಿಸಿದೆ. ಚಿತ್ರೀಕರಣಕ್ಕೆ ಅನುಮತಿ ಹಿನ್ನೆಲೆಯಲ್ಲಿ ಒಂದು ಪಾಳಿಯಲ್ಲಿ 10 ಮಂದಿ ಪೊಲೀಸ್ ಸಿಬ್ಬಂದಿಯನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಒಟ್ಟು 32 ಸಿಬ್ಬಂದಿ ಶೂಟಿಂಗ್ ಭದ್ರತೆಗೆ ನಿಯೋಜನೆಗೊಂಡಿದ್ದು, ನಟನ ಭದ್ರತೆಗಾಗಿ ಸಿಬ್ಬಂದಿ ನಿಯೋಜಿಸಲು 1,64,785 ರೂ. ಹಣ ಪಾವತಿ ಮಾಡಲಾಗುತ್ತಿದೆ ಎನ್ನಲಾಗಿದೆ.

ತಾಯಿ ಚಾಮುಂಡೇಶ್ವರಿ ಮೊರೆ ಹೋದ ನಟ ದರ್ಶನ್ 10 ತಿಂಗಳ ಬಳಿಕ ನಟ ದರ್ಶನ್ ಶೂಟಿಂಗ್ ನಲ್ಲಿ ಭಾಗಿಯಾಗಿದ್ದು, ಡೆವಿಲ್ ಶೂಟಿಂಗ್ ಗೂ ಮುನ್ನ ನಟ ದರ್ಶನ್ ದೇವರ ಮೊರೆ ಹೋಗಿದ್ದಾರೆ. ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿ ಆಶೀರ್ವಾದ ಪಡೆದಿದ್ದಾರೆ. ಚಾಮುಂಡಿ ಬೆಟ್ಟದಿಂದ ನೇರವಾಗಿ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿದ್ದು ಶೂಟಿಂಗ್ ನಲ್ಲಿ ನಟ ದರ್ಶನ್ ಭಾಗಿಯಾಗಿದ್ದಾರೆ.

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಬಳಿಕ ಡೆವಿಲ್ ಚಿತ್ರದ ಚಿತ್ರೀಕರಣ ಸ್ಥಗಿತಗೊಂಡಿತ್ತು. ರೇಣುಕಾಸ್ವಾಮಿ ಹತ್ಯೆಯಾದ ಬಳಿಕ ನಟ ದರ್ಶನ್ ಶೂಟಿಂಗ್ ನಲ್ಲಿ ಪಾಲ್ಗೊಂಡಿದ್ದರು. ನಂತರ ಮೈಸೂರಿನ ಲಲಿತಮಹಲ್ ಪ್ಯಾಲೇಸ್ ನಲ್ಲಿ ಚಿತ್ರೀಕರಣ ನಡೆಯುತ್ತಿದ್ದ ವೇಳೆಯೇ ನಟ ದರ್ಶನ್ ಅರೆಸ್ಟ್ ಆಗಿದ್ದರು.

## ಕೊಡುಗೆ ಅನುಪಮ

ಕೀರ್ತಿ ತಂದಿದ್ದಾರೆ ಎಂದು ತಿಳಿಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯರು ತಮ್ಮ ಜೀವನವನ್ನು ಕೇವಲ ಧಾರ್ಮಿಕ, ಆಧ್ಯಾತ್ಮಿಕತೆಗಷ್ಟೇ ಸೀಮಿತಗೊಳಿಸದೆ, ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದವರು. ಅವರು ಧರ್ಮ ದಂಡಯಾತ್ರೆ ಕೈಗೊಂಡು ವೀರಶೈವಧರ್ಮ ಕೇಂದ್ರಗಳು, ಭೂರುದ್ರ ಭಕ್ತ ಸಂಘಗಳನ್ನು ಸ್ಥಾಪಿಸಿ ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದ ಅಗ್ರೇಸರರೆಂದರು.

ಸಾವಿರಾರು ವರ್ಷಗಳ ಹಿಂದೆಯೇ ರೈತರ ಕಲ್ಯಾಣಕ್ಕಾಗಿ ಬಡಜನರ ಉದ್ದಾರಕ್ಕಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಕೈಗೊಂಡ ನಿರ್ಧಾರಗಳು ಅವರಿಗಿದ್ದ ಸಾಮಾಜಿಕ ಕಾಳಜಿಗೆ ಸಾಕ್ಷೀಭೂತವಾಗಿವೆ ಎಂದ ಈಶ್ವರ ಖಂಡ್ರೆ, ಅದೇ ಪರಂಪರೆಯನ್ನು ನಮ್ಮ ವೀರಶೈವ ಮಠಗಳು ಅನೂಚಾನವಾಗಿ ಮುಂದುವರಿಸಿಕೊಂಡು ಬಂದಿವೆ ಎಂದು ತಿಳಿಸಿದರು.

ಇಂತಹ ಜಯಂತಿ ಆಚರಣೆ ಇಂದಿನ ಪೀಳಿಗೆಗೆ ನಮ್ಮ ಪೂರ್ವಜರ ಮಹತ್ಕಾರ್ಯ, ಜನಸೇವೆಯ ಬಗ್ಗೆ ತಿಳಿಯಹೇಳುತ್ತದೆ. ಇದು ನಮ್ಮ ಸಂಸ್ಕೃತಿಯನ್ನು ಗಟ್ಟಿಗೊಳಿಸುತ್ತದೆ. ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಪಡುವಂತೆ ಮಾಡುತ್ತದೆ. ಇದು ಯುವ ಪೀಳಿಗೆಯಲ್ಲಿ ಮನಃಪರಿವರ್ತನೆಗೆ ಬೆಳಕಾಗಿ, ಸಮಾಜದ ಪರಿವರ್ತನೆಗೆ ದಾರಿದೀಪವಾಗುತ್ತದೆ ಎಂದು ಹೇಳಿದರು.

ಹಸಿದವರಿಗೆ ಅನ್ನ ನೀಡುವುದೇ ಧರ್ಮ:


ವಿಶ್ವಗುರು ಬಸವಣ್ಣನವರು ದಯೆಯೇ ಧರ್ಮದ ಮೂಲವಯ್ಯ ಎಂದು ಹೇಳಿದ್ದಾರೆ. ಬಿದ್ದವರನ್ನು ಮೇಲೆತ್ತುವುದೇ ಧರ್ಮ, ಹಸಿದವರಿಗೆ ಅನ್ನ ಹಾಕುವುದು ಧರ್ಮ, ವೃದ್ಧ ತಂದೆ, ತಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳುವುದು ಧರ್ಮ, ಗಿಡಮರಗಳಿಗೆ ನೀರೆರೆದು ಪೋಷಿಸುವುದು ಧರ್ಮ. ಇಂತಹ ಧರ್ಮದ ಪ್ರಚಾರವನ್ನು ವೀರಶೈವ, ಲಿಂಗಾಯತ ಮಠ ಮಾನ್ಯಗಳು ಮಾಡುತ್ತಿವೆ ಎಂದು ಹೇಳಿದರು.

ಪ್ರಕೃತಿ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ:

ಈ ಭೂಮಿಯಲ್ಲಿ ಹುಟ್ಟಿದ ಎಲ್ಲ ಮಹಾಪುರುಷರೂ ಪ್ರಕೃತಿ, ಪರಿಸರ ಹಾಗೂ ಅರಣ್ಯವನ್ನು ಉಳಿಸಲು ಮಹತ್ವದ ಕಾಳಜಿ ತೋರಿದ್ದಾರೆ. ಪ್ರಕೃತಿ ಮತ್ತು ಪರಿಸರ ಉಳಿಸುವುದು ನಮ್ಮೆಲ್ಲರ ಹೊಣೆಯಾಗಿದೆ. ಪ್ರತಿಯೊಬ್ಬರೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರೆ ಮುಂದಿನ ಪೀಳಿಗೆಗೆ ಇರುವ ಒಂದೇ ಭೂಮಿಯನ್ನು ಉತ್ತಮವಾಗಿ ಹಸ್ತಾಂತರಿಸಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ವೀರಶೈವ ಮತ್ತು ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಶ್ರೀಕ್ಷೇತ್ರ ಯಡೆಯೂರು ಸಂಸ್ಥಾನದ ಪರಮಪೂಜ್ಯ ಶ್ರೀ ರೇಣುಕಾ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತಿತರರು ಪಾಲ್ಗೊಂಡಿದ್ದರು.

# ವಿಜಯಪುರ ಪುರಸಭೆಯ ನೂತನ ಅಧ್ಯಕ್ಷೆ-ಉಪಾಧ್ಯಕ್ಷೆ ಆಯ್ಕೆ



**ದೇವನಹಳ್ಳಿ:** ದೇವನಹಳ್ಳಿ ತಾಲೂಕು ವಿಜಯಪುರ ಪುರಸಭೆಯ ಅಧ್ಯಕ್ಷೆಯಾಗಿ ಭವ್ಯಮಧು, ಹಾಗೂ ಉಪಾಧ್ಯಕ್ಷೆಯಾಗಿ ತಾಜುನ್ನಿಸಾಮಹಬೂಬ್ ಪಾಷ ಅವರು ಚುನಾಯಿತರಾಗಿದ್ದಾರೆ ಎಂದು ಚುನಾವಣಾಧಿಕಾರಿ, ತಹಶೀಲ್ದಾರ್ ಹೆಚ್.ಬಾಲಕೃಷ್ಣ ಅವರು ಘೋಷಣೆ ಮಾಡಿದರು.

ವಿಜಯಪುರ ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಸಾಮಾನ್ಯ ಮಹಿಳೆಗೆ ನಿಗದಿಯಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ನಿಂದ ವಿಮಲಾಬಸವರಾಜ್, ಕಾಂಗ್ರೆಸ್ ನಿಂದ ಭವ್ಯಮಧು ಅವರು ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ನಿಂದ ತಾಜುನ್ನಿಸಾಮಹಬೂಬ್ ಪಾಷ, ಕಾಂಗ್ರೆಸ್ ನಿಂದ ಸಲ್ಮಾಖಾನಂ ಅವರು ನಾಮಪತ್ರಗಳು ಸಲ್ಲಿಸಿದ್ದರು.

23 ಮಂದಿ ಸದಸ್ಯರ ಪೈಕಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಭವ್ಯಮಧು ಅವರಿಗೆ 17 ಮತಗಳು, ವಿಮಲಾಬಸವರಾಜ್ ಅವರಿಗೆ 6 ಮತಗಳು, ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿಗಳಾದ ತಾಜುನ್ನಿಸಾಮಹಬೂಬ್ ಪಾಷ ಅವರಿಗೆ 19 ಮತಗಳು, ಸಲ್ಮಾಖಾನಂ ಅವರಿಗೆ 4 ಮತಗಳು ಬಂದಿವೆ.

13 ಮಂದಿ ಜೆಡಿಎಸ್ ಸದಸ್ಯರ ಪೈಕಿ ಅಧ್ಯಕ್ಷಸ್ಥಾನದ ಅಭ್ಯರ್ಥಿ ಭವ್ಯಮಧು ಅವರಿಗೆ ಜೆಡಿಎಸ್ ನ 7 ಮತಗಳು, ಕಾಂಗ್ರೆಸ್ ನ 7 ಮತಗಳು, ಪಕ್ಷೇತರ 2 ಬಿಜೆಪಿಯ 1 ಮತಗಳು, ವಿಮಲಾಬಸವರಾಜ್ ಅವರಿಗೆ ಜೆಡಿಎಸ್ ನ 6 ಮತಗಳು, ಚಲಾವಣೆಯಾಗಿದ್ದರೆ, ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ನಿಂದ ಸ್ಪರ್ಧಿಸಿದ್ದ ತಾಜುನ್ನಿಸಾಮಹಬೂಬ್ ಪಾಷ ಅವರಿಗೆ ಜೆಡಿಎಸ್ ನಿಂದ 13 ಮತಗಳು, ಕಾಂಗ್ರೆಸ್ ನ 4 ಪಕ್ಷೇತರ 1 ಬಿಜೆಪಿ 1, ಕಾಂಗ್ರೆಸ್ ನ ಸಲ್ಮಾಖಾನಂ ಅವರಿಗೆ ಕಾಂಗ್ರೆಸ್ ನಿಂದ 3, ಪಕ್ಷೇತರ-1 ಮತಗಳು ಲಭಿಸಿವೆ.

ಪಟ್ಟಣದ ಅಭಿವೃದ್ಧಿಗಾಗಿ 23 ಜನ ಸದಸ್ಯರುಗಳು ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ. ಇಲ್ಲಿ ಯಾರ ಪ್ರತಿಷ್ಠೆಯೂ ಇಲ್ಲ. ನಾವೆಲ್ಲರೂ ಒಂದಾಗಿ ಪಟ್ಟಣವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇವೆ ಎಂದು ನೂತನ ಅಧ್ಯಕ್ಷೆ ಭವ್ಯಮಧು ಹೇಳಿದರು.

ಪುರಸಭೆ ಸದಸ್ಯ ಎ.ಆರ್.ಹನೀಪುಲ್ಲಾ ಮಾತನಾಡಿ, ಪುರಸಭೆಯಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್ ಸದಸ್ಯರು ಹಾಗೂ ಬಿಜೆಪಿ ಸದಸ್ಯೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ಚಲಾವಣೆ ಮಾಡುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಕೆ.ಹೆಚ್.ಮುನಿಯಪ್ಪ ಅವರ ಕಾರ್ಯವೈಖರಿಯನ್ನು ಮೆಚ್ಚಿಕೊಂಡಿದ್ದಾರೆ. ಜೆಡಿಎಸ್ ಪಕ್ಷದಿಂದ ವಿಪ್ ಜಾರಿ ಮಾಡಿದ್ದರೂ ಲೆಕ್ಕಿಸದೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ಹಾಕಿದ್ದಾರೆ. ಅವರ ಪಕ್ಷದ ಜಿಲ್ಲಾಧ್ಯಕ್ಷರು ಕ್ರಮ ಕೈಗೊಳ್ಳಲಿದ್ದಾರೆ. ನಾವೆಲ್ಲರೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಹಾಕಿದ್ದೇವೆ ಎಂದರು.

ಜೆಡಿಎಸ್ ನ ಪುರಸಭೆ ಸದಸ್ಯ ಸಿ.ಎಂ.ರಾಮು ಮಾತನಾಡಿ, ಜೆಡಿಎಸ್ ಪಕ್ಷದಿಂದ ಜನರು ಗೆಲ್ಲಿಸಿರುವ ಸದಸ್ಯರೇ ಅಧಿಕಾರ ಅನುಭವಿಸಿಯೂ ಇಂದು ಪಕ್ಷಕ್ಕೆ ದ್ರೋಹ ಬಗೆದರು. ಪಕ್ಷದಿಂದ ವಿಪ್ ಜಾರಿ ಮಾಡಿದ್ದರೂ ಅದನ್ನು ಕಡೆಗಣಿಸಿದ್ದಾರೆ. ಪಕ್ಷದ ಅಭ್ಯರ್ಥಿಯ ವಿರುದ್ಧವಾಗಿ ಮತ ಚಲಾಯಿಸಿದರು. ಪಟ್ಟಣದಲ್ಲಿ ಪಕ್ಷವನ್ನು ಹಾಳು ಮಾಡಿದರು. ಪಕ್ಷದ ನಾಯಕರು ದ್ರೋಹ ಬಗೆದವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಕಣ್ಣೀರಿಟ್ಟರು. ಮಾಜಿ ಅಧ್ಯಕ್ಷೆ ವಿಮಲಾಬಸವರಾಜ್ ಅವರು ಸದಸ್ಯರನ್ನು ಸಮಾಧಾನ ಪಡಿಸಿದರು.

ಕಾಂಗ್ರೆಸ್ ನ ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಗೌಸ್ ಖಾನ್ ಮಾತನಾಡಿ, ಪಕ್ಷದ ಶಾಸಕರ ನಿರ್ದೇಶನದಂತೆ ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯ ಸೇರಿ ಅಧ್ಯಕ್ಷ, ಉಪಾಧ್ಯಕ್ಷರಿಬ್ಬರಿಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ಹಾಕಿದ್ದೇವೆ. ಆದರೆ, ನಮ್ಮ ಪಕ್ಷದ 4 ಮಂದಿ ಸದಸ್ಯರು, ಉಪಾಧ್ಯಕ್ಷ ಸ್ಥಾನಕ್ಕೆ ಪಕ್ಷದ ಅಭ್ಯರ್ಥಿಯನ್ನು ಬಿಟ್ಟು, ಜೆಡಿಎಸ್ ಅಭ್ಯರ್ಥಿಗೆ ಮತ ಚಲಾಯಿಸುವ ಮೂಲಕ ಪಕ್ಷದ ತತ್ವ ಸಿದ್ಧಾಂತಗಳನ್ನು ಗಾಳಿಗೆ ತೂರಿದ್ದಾರೆ. ಈ ಹಿಂದೆ 2021 ರಲ್ಲೂ ಚುನಾವಣಾ ಪ್ರಕ್ರಿಯೆಯಲ್ಲಿ ಮತ ಚಲಾಯಿಸಲು ಬರಲಿಲ್ಲ. ಈಗ ಪಕ್ಷದ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ. ಈ ಕುರಿತು ಪಕ್ಷದ ಹೈಕಮಾಂಡ್ ಗಮನಿಸಿ ಅವರು ಯಾವ ರೀತಿಯಾಗಿ ಶಿಸ್ತು ಕ್ರಮ ಕೈಗೊಳ್ಳುತ್ತಾರೆ ಎನ್ನುವ ಬಗ್ಗೆ ಕುತೂಹಲವಿದೆ ಎಂದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರು ಆಯ್ಕೆಯಾಗುತ್ತಿದ್ದಂತೆ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು, ಪಟಾಕಿಗಳು ಸಿಡಿಸಿ, ಸಿಹಿ ಹಂಚಿಕೆ ಮಾಡಿ ಸಂಭ್ರಮಿಸಿದರು.

ಬಿಜೆಪಿ ಮುಖಂಡ ಬಿ.ಚೇತನ್ ಗೌಡ, ಕೆಪಿಸಿಸಿ ಸದಸ್ಯ ಎ.ಚಿನ್ನಪ್ಪ, ಎಂ.ಸತೀಶ್ ಕುಮಾರ್, ವಿ.ನಂದಕುಮಾರ್, ಸಂಪತ್ ಕುಮಾರ್, ವಿ.ರಾಮಚಂದ್ರಪ್ಪ, ಮಾಜಿ ಪುರಸಭೆ ಸದಸ್ಯ ಮುನಿಚಿನ್ನಪ್ಪ, ಕೆ.ಎಂ.ಮಧುಮಹೇಶ್, ಆರ್.ಮುನಿರಾಜು, ಸೊಣ್ಣೇಗೌಡ, ಆರ್.ಎಂ.ಸಿಟಿ ಮಂಜುನಾಥ್, ಸೈಪುಲ್ಲಾ, ಸಜ್ಜದ್, ಮುನಿಕೃಷ್ಣಪ್ಪ, ಪ್ರಕಾಶ್, ಸಂಪತ್ ಕುಮಾರ್, ಮುಂತಾದ ಹಾಜರಿದ್ದರು.

# ಒಳ ಮೀಸಲಾತಿ ಇಲ್ಲದೇ ಬ್ಯಾಕ್‌ಲಾಗ್ ಭರ್ತಿ ಬೇಡ



**ಕುಕನೂರು:** ಒಳಮೀಸಲಾತಿ ಜಾರಿ ಮಾಡದೇ ಯಾವುದೇ ಕಾರಣಕ್ಕೂ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡುವುದನ್ನು ನಿಲ್ಲಿಸಬೇಕು ಎಂದು ಅಖಿಲ ಭಾರತ ಮಾದಿಗ ದಂಡೋರ ಸಮಿತಿಯ ರಾಜ್ಯಾಧ್ಯಕ್ಷ ಬಿ ಹುಸೇನಪ್ಪ ಸ್ವಾಮಿ ಆಗ್ರಹಿಸಿದ್ದಾರೆ.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ನಾಳೆ ಕೊಪ್ಪಳದಲ್ಲಿ ಪ್ರತಿಭಟನೆ ಬುಧುವಾರ ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಒಳ ಮೀಸಲಾತಿ ಜಾರಿಗೆ ವಿಳಂಬಕ್ಕೆ ಕಾಂಗ್ರೆಸ್ ಸರಕಾರ ಕಾರಣವಾಗಿದ್ದು ಇದರ ವಿರುದ್ಧ ಮಾ.12ರಂದು ಕೊಪ್ಪಳದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಅಖಿಲ ಭಾರತ ಮಾದಿಗ ದಂಡೋರ ಸಮಿತಿ ರಾಜ್ಯಾಧ್ಯಕ್ಷ ಹುಸೇನಪ್ಪಸ್ವಾಮಿ ಮಾದಿಗ ಹೇಳಿದ್ದಾರೆ.

ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಎಸ್.ಎಂ ಕೃಷ್ಣ ಅವರು ಮುಖ್ಯಮಂತ್ರಿ ಅವಧಿಯಿಂದ ಇದನ್ನು ಜಾರಿಗೆ ತರುವಂತೆ ಒತ್ತಾಯಿಸಲಾಗುತ್ತದೆ. ಆದರೆ ಇನ್ನೂ ವರೆಗೆ ಕಾಯ9ರೂಪಕ್ಕೆ ತರಲು ವಿಳಂಬವಾಗುತ್ತದೆ, ಇತ್ತೀಚೆಗೆ ಸುಪ್ರೀಂಕೋರ್ಟ್ ಆದೇಶ ವಿದ್ದರೂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಒಳ ಮೀಸಲಾತಿ ಜಾರಿಗೆ ತರಲು ಹಿಂದೇಟು ಹಾಕುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಸಚಿವ ಮಹದೇವಪ್ಪ ಅವರ ಪಾತ್ರ ಪ್ರಮುಖವಾಗಿದೆ ಆದರೆ ಮಹಾದೇವಪ್ಪ ಈ ವಿಷಯದಲ್ಲಿ ಮೌನ ವಹಿಸಿದ್ದು ಸರಿಯಾದ ಕ್ರಮವಲ್ಲ. ಮಾದಿಗ ಸಮಾಜ ಬಾಂಧವರು ಮೊದಲಿನಿಂದಲೂ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತಾ ಬಂದಿದೆ ಆದರೆ ಕಾಂಗ್ರೆಸ್ ಈ ವಿಷಯದಲ್ಲಿ ಸಮಾಜಕ್ಕೆ ಮೋಸ ಮಾಡ್ತಾ ಬಂದಿದೆ, ಇದೆ ರೀತಿ ವಿಳಂಬ ಮಾಡಿದರೆ ಕಾಂಗ್ರೆಸ್ ಗೆ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ತಿಳಿಸಿದರು.

12 ರಂದು ನಡೆಯುವ ಹೋರಾಟಕ್ಕೆ ಜಿಲ್ಲೆಯ ಜನತೆ, ಸಮಾಜ ಬಾಂಧವರು ಬುದ್ದಿಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಹುಲಗಪ್ಪ ಹಿರೇಮನಿ ಬಸವರಾಜ್ ನಡುಲಮನಿ, ಶರಣಪ್ಪ ಹಿರೇಮನಿ, ದೇವಪ್ಪ ಹರಿಜನ, ಮಹೇಶ್ ಹಿರೇಮನಿ, ನಾಗರಾಜ್ ತಳಕಲ್ ,ಪ್ರಕಾಶ್ ಉಜ್ಜಮ್ಮಣವರ್ ಇತರರೂ ಹಾಜರಿದ್ದರು.

# ಹೋರಾಟ ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ

**ಮುಳಬಾಗಿಲು:** ತಾಲ್ಲೂಕಿನ ಮುದಿಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯವನ್ನು ಮುದಿಗೆರೆ ಗ್ರಾಮದಲ್ಲೇ ತೆರೆಯಲು ಒತ್ತಾಯಿಸಿ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಸತ್ಯಾಗ್ರಹ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಹಮ್ಮಿಕೊಂಡಿದ್ದು ಪ್ರತಿಭಟನಾ ಸ್ಥಳಕ್ಕೆ ಮೊದಲನೇ ದಿನವಾದ ಇ.ಓ ಸರ್ವೇಶ್ ರವರು ಆಗಮಿಸಿ ಪಂಚಾಯಿತಿ ಕಾರ್ಯಾಲಯವನ್ನು ಬದಲಾವಣೆ ಮಾಡಲು ಆಗುವುದಿಲ್ಲವೆಂದು ಅಸಡ್ಡೆಯಿಂದ, ದಲಿತ ವಿರೋಧಿಯಂತೆ ಮಾತನಾಡಿ ಹೋರಾಟವನ್ನು ಹತ್ತಿಕ್ಕುವ ರೀತಿ ಹೋರಾಟಗಾರರನ್ನು ಬೆದರಿಸುವ ರೀತಿಯಲ್ಲಿ ವರ್ತನೆ ಮಾಡಿದ್ದು, ನಾವು ಯಾವುದೇ ಕಾರಣಕ್ಕೂ ಪಂಚಾಯಿತಿ ಕಾರ್ಯಾಲಯವನ್ನು ಮುದಿಗೆರೆಯಲ್ಲಿ ತೆರೆಯದೆ ಹೋರಾಟ ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ ಎಂದು ಎಷ್ಟು ದಿನವಾದರೂ ಹೋರಾಟ ಮುಂದುವರೆಸುತ್ತೇವೆಂದು ತಿಳಿಸಿದರು.

ನಾಳೆಯಿಂದ ಹೋರಾಟದ ರೂಪುರೇಷೆಗಳು ಬದಲಾವಣೆ ಆಗಲಿದ್ದು , ಕಾನೂನು ಸುವ್ಯವಸ್ಥೆಗೆ ತೊಂದರೆಯಾದರೆ ಅದಕ್ಕೆ ತಾ.ಪಂ.ಅಧಿಕಾರಿಗಳೇ ನೇರ ಹೊಣೆಗಾರರೆಂದು ಜಿಲ್ಲಾ ಸಂಯೋಜಕ ಮೆಕಾನಿಕ್ ಶ್ರೀನಿವಾಸ್ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರುಗಳಾದ ಮೆಕಾನಿಕ್ ಶ್ರೀನಿವಾಸ್,ಕೀಲುಹೊಳಲಿ ಸತೀಶ್, ಗುಜ್ಜಮಾರಂಡಹಳ್ಳಿ ಜಗದೀಶ್, ಕೋಡಿಹಳ್ಳಿ ಶ್ರೀನಿವಾಸ್, ತಾತಿಕಲ್ ರಾಮಚಂದ್ರ, ಗಣೇಶ್ ಪಾಳ್ಯ ಕಿಟ್ಟಿ,ಓ.ಗಿ. ಬಾಲಕೃಷ್ಣ, ಬಂಡಹಳ್ಳಿ ಶ್ರೀರಾಮ್,ವಾನಿಗಾನಹಳ್ಳಿ ವೆಂಕಟೇಶ್, ರೆಡ್ಡಿ ಹಳ್ಳಿ ಅಭಿ, ಮೇಸ್ತ್ರಿ ಸುಬ್ರಮಣಿ, ನಾಗರಾಜ್, ರಮೇಶ್, ಗ್ರಾಮ ಪಂಚಾಯಿತಿ ಸದಸ್ಯರಾದ ಅಂಬರೀಶ್,ರೆಡ್ಡಮ್ಮ ಚಿನ್ನಪ್ಪಯ್ಯಾ,ಸಂಪತ್, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ರಾಜಪ್ಪ, ಚಂದ್ರಪ್ಪ, ವಿಶ್ವನಾಥ್, ಜಗನ್, ಆಂಜಿ, ರಾಧಾಕೃಷ್ಣ, ಶ್ರೀನಿವಾಸ್, ವಿನೋದ್, ವೆಂಕಟರಾಮಪ್ಪ, ಚಲಪತಿ, ಸೋಮಪ್ಪ, ರಮೇಶ್,ರೆಡ್ಡಪ್ಪ, ಗೋವಿಂದ ರಾಜ್, ಮತ್ತಿತರರು ಭಾಗವಹಿಸಿದರು



# ಕಳೆದ ವರ್ಷಕ್ಕಿಂತಲೂ ಕಡಿಮೆ ಹರಾಜು ಮರು ಹರಾಜು ನಡೆಸಲು ನಿರ್ಧಾರ



**ಶಿಡ್ಲಘಟ್ಟ:** ನಗರಸಭೆಯ ಸಮುದಾಯ ಭವನದಲ್ಲಿ ನಗರಸಭೆ ವ್ಯಾಪ್ತಿಯ ವಿವಿಧ ವಸೂಲಾತಿ ಹಕ್ಕಿನ ವಾರ್ಷಿಕ ಬಹಿರಂಗ ಹರಾಜು ನಡೆಯಿತು.

ವಾರದ ಸಂತೆ ಮಾರುಕಟ್ಟೆ, ದಿನವಹಿ ಮಾರುಕಟ್ಟೆ, ಖಾಸಗಿ ಬಸ್ಗಳ ವಾಹನ ನಿಲ್ದಾಣ ಶುಲ್ಕ ಹಾಗೂ ಒಳ ಚರಂಡಿ ಶುದ್ಧೀಕರಣ ಘಟಕದ ಶುಲ್ಕದ ಬಹಿರಂಗ ಹರಾಜು ನಡೆಯಿತು.

ವಾರದ ಸಂತೆ ಮಾರುಕಟ್ಟೆ-3.02 ಲಕ್ಷ ರೂ.ಗಳು, ದಿನವಹಿ ಮಾರುಕಟ್ಟೆ-3.8 ಲಕ್ಷ ರೂ.ಗಳು, ಖಾಸಗಿ ಬಸ್ಗಳ ವಾಹನ ನಿಲ್ದಾಣ ಶುಲ್ಕ- 2 ಲಕ್ಷ ರೂ.ಗಳು ಹಾಗೂ ಒಳ ಚರಂಡಿ ಶುದ್ಧೀಕರಣ ಘಟಕದ ಶುಲ್ಕದ ಹರಾಜು 1 ಲಕ್ಷ ರೂ.ಗಳಿಗೆ ಹರಾಜು ನಡೆಯಿತು.

ಕಳೆದ ವರ್ಷ ಒಳ ಚರಂಡಿ ಶುದ್ಧೀಕರಣ ಘಟಕದ ಶುಲ್ಕ ಸಂಗ್ರಹ ಹರಾಜಿನಲ್ಲಿ ಯಾರು ಕೂಡ ಭಾಗವಹಿಸಿರಲಿಲ್ಲ,ಈ ವರ್ಷ 1 ಲಕ್ಷ ರೂ.ಗಳಿಗೆ ಹರಾಜು ನಡೆಯಿತು. ಇನ್ನುಳಿದಂತೆ ವಾರದ ಸಂತೆ ಮಾರುಕಟ್ಟೆ ಕಳೆದ ವರ್ಷ 4.08 ಲಕ್ಷ ರೂ.ಗಳು ದಿನವಹಿ ಮಾರುಕಟ್ಟೆ-3.63 ಲಕ್ಷ ರೂ.ಗಳು ಹಾಗು ಖಾಸಗಿ ಬಸ್ ಗಳ ವಾಹನ ನಿಲ್ದಾಣ ಶುಲ್ಕ-3.91 ಲಕ್ಷ ರೂ.ಗಳಿಗೆ ಹರಾಜು ನಡೆದಿತ್ತು.

ಕಳೆದ ವರ್ಷಕ್ಕಿಂತಲೂ ಕಡಿಮೆ ಹರಾಜು ನಡೆದಿದ್ದು ಮತ್ತೆ ಮರು ಹರಾಜು ಮಾಡಲಾಗುವುದು, ಈ ಬಗ್ಗೆ ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿ ಈ ಹರಾಜನ್ನು ಮುಂದೂಡುವುದು, ರದ್ದುಪಡಿಸುವುದು ಅಥವಾ ಇನ್ನೇನು ಮಾಡಬೇಕೆಂದು ನಿರ್ಧರಿಸಲಾಗುವುದು ಎಂದು ನಗರಸಭೆ ಪ್ರಭಾರಿ ಪೌರಾಯುಕ್ತ ಮೋಹನ್ ಕುಮಾರ್ ಅವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ಎಂ.ವಿ.ವೆಂಕಟಸ್ವಾಮಿ , ಬಿಡ್ ದಾರರು ಹಾಜರಿದ್ದರು

# ಸಮಾಜಕ್ಕಾಗಿ ಅಗಲಿರಳು ದುಡಿಯುತ್ತಿರುವ ಪರಿಸರ ಪ್ರೇಮಿ

ಶಿಡ್ಲಘಟ್ಟ: ತಮ್ಮ ಆಪ್ತ ಸ್ನೇಹಿತ ಪರಿಸರ ಪ್ರೇಮಿ ದಿವಂಗತ ಬೆಳ್ಳೂಟಿ ಸಂತೋಷ್ ಅವರ ಕನಸುಗಳನ್ನು ನನಸಾಗಿಸಲು ಬೆಳ್ಳೂಟಿ ಗೇಟ್ ಬಳಿಯ ಶ್ರೀಗುಟ್ಟಾಂಜನೇಯಸ್ವಾಮಿ ದೇವಾಲಯದ ಕಲ್ಯಾಣ ಮಂಟಪಕ್ಕೆ ಕಾಂಗ್ರೆಸ್ ಮುಖಂಡ ಆಂಜಿನಪ್ಪ (ಪುಟ್ಟು) ಅವರು ಒಟ್ಟು 18 ಲಕ್ಷ ರೂ.ಗಳನ್ನು ಖರ್ಚು ಮಾಡಿ ತಮ್ಮ ಸೇವೆಯನ್ನು ಮುಂದುವರಿಸುವ ಮೂಲಕ ಸಾರ್ವಜನಿಕ ವಲಯದಲ್ಲಿ ಪ್ರಶಂಸನೀಯರಾಗಿದ್ದಾರೆ.

ತಾಲ್ಲೂಕಿನ ಬೆಳ್ಳೂಟಿ ಗೇಟ್ ಬಳಿಯಿರುವ ಶ್ರೀಗುಟ್ಟಾಂಜನೇಯ ಸ್ವಾಮಿ ದೇವಾಲಯದ ಕಲ್ಯಾಣ ಮಂಟಪದಲ್ಲಿ ನಡೆಯುವ ಮದುವೆ ಹಾಗು ಇನ್ನಿತರೆ ಕಾರ್ಯಗಳಿಗೆ ಅಡುಗೆ ಮಾಡಲು 6 ಲಕ್ಷ 50 ಸಾವಿರ ರೂ.ಗಳ ಪಾತ್ರೆ ಹಾಗು ಸಾಮಗ್ರಿಗಳನ್ನು ದೇವಾಲಯದ ಸಮಿತಿಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ಸಮಾಜಕ್ಕಾಗಿ ಅಗಲಿರಳು ದುಡಿಯುತ್ತಿದ್ದ ಪರಿಸರ ಪ್ರೇಮಿ, ಜನಾನುರಾಗಿ ಸಂತೋಷ್ ಪ್ರತಿಕ್ಷಣವೂ ಎಲ್ಲರನ್ನೂ ನಗಿಸುತ್ತಾ ಇದ್ದ ವ್ಯಕ್ತಿ ಅವರು ನಮ್ಮ ಜೊತೆ ಇಲ್ಲದಿದ್ದರೂ ಸಹ, ಅವರ ಸಮಾಜ ಸೇವೆ ನಮ್ಮ ಪ್ರೇರಣೆಯಾಗಿದೆ ದೇವಾಲಯದ ಇನ್ನು ಮುಂದೆ ಬಡವರ ಮದುವೆಗಳಿಗೆ ಉಚಿತವಾಗಿ ಕಾರ್ಯಕ್ರಮ ಮಾಡಲು ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ ಎಂದು ಹೇಳಿದರು.

ಇದಲ್ಲದೇ ಇತ್ತೀಚಿನ ದಿನಗಳಲ್ಲಿ ದೇವಾಲಯದ ಸಂಬಂಧಿಸಿದ ಸ್ಥಳದಲ್ಲಿ ಸುತ್ತಲೂ ಕಾಂಪೌಂಡ್ ನಿರ್ಮಾಣ, ಶೌಚಾಲಯದ ವ್ಯವಸ್ಥೆ,ಹೈ-ಮಾಸ್ಕ್ ವಿದ್ಯುತ್ ದೀಪ, ದೇವಾಲಯದ ಮುಂದೆ ಚಾವಣಿ,ಕಲ್ಯಾಣ ಮಂಟಪಕ್ಕೆ ಬಣ್ಣ ಹಾಕಿಸುವ ಕೆಲಸ ಮಾಡಿಸಿದ್ದಾರೆ ಜತೆಗೆ ಊಟದ ಕೋಣೆಗೆ ಫ್ಯಾನ್ ಗಳು ಮತ್ತು ವಿದ್ಯುತ್ ಸಂಪರ್ಕವನ್ನು ಮಾಡಿಸಿದ್ದಾರೆ.

ಊಟದ ಕೊಠಡಿಯಲ್ಲಿ ಕಲ್ಲಿನ ಟೇಬಲ್‌ಗಳ ಸ್ಥಾಪನೆ, ಬಡವರ ಮದುವೆಗಳು ಇತ್ಯಾದಿ ಕಾರ್ಯಕ್ರಮಗಳು ನಡೆಯುವುದರಿಂದ ಗ್ರೈಂಡರ್, ಮಿಕ್ಸಿ, ಇತ್ಯಾದಿ ಸಾಮಾಗ್ರಿಗಳನ್ನು ನೀಡುವ ಮೂಲಕ ಅವರು ಸಮಾಜ ಸೇವೆಯನ್ನು ಮುಂದುವರಿಸಿದ್ದಾರೆ.

ಈ ಸಂದರ್ಭದಲ್ಲಿ ಬೆಳ್ಳೂಟಿ ಗ್ರಾಮ ಪಂಚಾಯತಿ ಸದಸ್ಯರಾದ ವರಲಕ್ಷ್ಮಿ ಸಂತೋಷ್, ಪಿ.ಎಲ್.ಡಿ.ಬ್ಯಾಂಕ್ ನಿರ್ದೇಶಕರಾದ ಗುಡಿಹಳ್ಳಿ ಚಂದ್ರನಾಥ್,ರೈತ ಸಂಘದ ಮುನಿಕೆಂಪಣ್ಣ,ಬೆಳ್ಳೂಟಿ ವೆಂಕಟೇಶ್, ಗುಂಡಪ್ಪನವರ ಮುನೇಗೌಡ, ಆನೂರು ದೇವರಾಜ್, ಹಿತ್ತಲಹಳ್ಳಿರಮೇಶ್, ಸುರೇಶ್,ಮುನಿರಾಜು, ಸುಗಟೂರು ನಾಗೇಶ್, ದೊಡ್ಡದಾಸರಹಳ್ಳಿ ದೇವರಾಜ್,ಬೂದಾಳ ವರದರಾಜ್, ಮಳಮಾಚನಹಳ್ಳಿ ಸಂತೋಷ್, ರಮೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್, ಉಪಾಧ್ಯಕ್ಷ ರಾಕೇಶ್ ಚಿಲಕಲನೇರ್ಪು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಡಿ.ಎನ್. ರವಿಚಂದ್ರ ಹಾಗೂ ಬೆಳ್ಳೂಟಿ ಹಾಗು ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು.



# ರಸ್ತೆ ಕಾಮಗಾರಿ ಶೀಘ್ರದಲ್ಲಿ ಮಾಡಿಕೊಡಲು ಮನವಿ



ಬಳ್ಳಾರಿ: ತಾಲ್ಲೂಕಿನ ಹಲಕುಂದಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಹೊನ್ನಳ್ಳಿ ಗ್ರಾಮದ ಸ್ಮಶಾನಕ್ಕೆ ಹೋಗುವ ದಾರಿ ಸುಮಾರು ವರ್ಷಗಳಿಂದ ಪಾಳು ಬಿದ್ದಿತ್ತು. ಈ ರಸ್ತೆ ಕಾಮಗಾರಿ ಅತಿ ಶೀಘ್ರದಲ್ಲಿ ಮಾಡಿಕೊಡಬೇಕೆಂದು ಮಾಜಿ ಅಧ್ಯಕ್ಷರಲ್ಲಿ ಗ್ರಾಮಸ್ಥರು ಮನವಿ ಮಾಡಿದರು.


ತಕ್ಷಣ ಸ್ಪಂದಿಸಿದ ಮಾಜಿ ಅಧ್ಯಕ್ಷರಾದ ತಾಯಮ್ಮ ಬಸವರಾಜ್, ಈಗ ನರೇಗ ಯೋಜನೆ ಅಡಿಯಲ್ಲಿ ಹೊನ್ನಳ್ಳಿ ಗ್ರಾಮದ ಸ್ಮಶಾನಕ್ಕೆ ಹಾದು ಹೋಗುವ ದಾರಿಯ ಬರದಿಂದ ಸಾಗಿದ ಕಾಮಗಾರಿ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ತಾಯಮ್ಮ ಬಸವರಾಜ್, ಪಂಚಾಯಿತಿ ಸದಸ್ಯರಾದ ಗೋವಿಂದ ಇವರುಗಳ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

# ಕರವೇ ಸಂಘಟನೆಗೆ ಸೇರ್ಪಡೆಯಾದ ಹಲವು ಮುಖಂಡರು

ಮಾಲೂರು: ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ರವರ ಸಂಘಟನೆಗೆ ಹಲವಾರು ಸಂಘಟನೆಗಳ ಪದಾಧಿಕಾರಿಗಳು ರಾಜ್ಯ ಅಧ್ಯಕ್ಷರ ಸಮ್ಮುಖದಲ್ಲಿ ಸೇರ್ಪಡೆಗೊಂಡರು.

ಪದಾಧಿಕಾರಿಗಳ ಸೇರ್ಪಡೆ ಮಾಡಿಕೊಂಡು ಮಾತನಾಡಿದ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ , ಕೋಲಾರ ಜಿಲ್ಲೆಗೆ ಕೃಷ್ಣಾ ನದಿ ಕುಡಿಯುವ ನೀರಿನ ಯೋಜನೆ ಮತ್ತು ಎತ್ತಿನಹೊಳೆ ಯೋಜನೆ ಅತಿ ವೇಗದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಜಾರಿ ಮಾಡಲು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಅವಿರತವಾಗಿ ಹೋರಾಟಗಳನ್ನು ಮಾಡುವುದರ ಮುಖಾಂತರ ಎರಡು ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಕೆಲಸವನ್ನು ಸರ್ಕಾರಕ್ಕೆ ಮುಟ್ಟುವ ರೀತಿ ಹೋರಾಟಗಳನ್ನು ರೂಪಿಸಿ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಬೃಹತ್ ಹೋರಾಟವನ್ನು ಮಾಡುವುದರ ಮುಖಾಂತರ ರೈತರಿಗೆ ಮತ್ತು ಸಾರ್ವಜನಿಕರಿಗೆ ಶಾಶ್ವತ ನೀರಾವರಿ ಒದಗಿಸುವ ಕೆಲಸಕ್ಕೆ ನಮ್ಮ ಕರವೇ ಮುಂದೆ ಬರಬೇಕಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಶಿವರಾಜ್ ಗೌಡ ,ಮಂಜೇಶ್, ಲೋಕೇಶ್, ಜಿಲ್ಲಾಧ್ಯಕ್ಷ ಚಂಬೇ ರಾಜೇಶ್, ಜಿಲ್ಲಾ ಮಹಿಳಾ ಅಧ್ಯಕ್ಷೆ ಮಂಜುಳಾ. ಮುಳುಬಾಗಿಲು ತಾಲೂಕು ಅಧ್ಯಕ್ಷರ ಹರೀಶ್ ಗೌಡ, ತಾಲೂಕು ಅಧ್ಯಕ್ಷ ಶಿವಾರನಾರಾಯಣಸ್ವಾಮಿ. ಕಾರ್ಯಾಧ್ಯಕ್ಷ ಎನ್ ರಾಮಕೃಷ್ಣಪ್ಪ, ತಾಲೂಕು ಪ್ರಧಾನ ಕಾರ್ಯದರ್ಶಿ ಎಂ ಎನ್ ಮಣಿ, ತಾಲೂಕು ಸಲಹೆಗಾರ ಎ ಎನ್ ದಯಾನಂದ, ಉಪಾಧ್ಯಕ್ಷ ಚಿರಂಜೀವಿ, ಸುಧಾಕರ್ ಗೌಡ, ಮಹಿಳಾ ಘಟಕದ ಅಧ್ಯಕ್ಷೆ ಅಮರಾವತಿ, ಜಿಲ್ಲಾ ಉಪಾಧ್ಯಕ್ಷೆ ದ್ರಾಕ್ಷಾಯಿಣಿ,ತಾಲೂಕು ಕಾರ್ಯದರ್ಶಿ ಮಿಥುನ್,ಚ ಬಿಎಸ್ ಮಂಜುನಾಥ, ಅಮರನಾಥ, ಪೂಜಾರಿ ನಗರ ಅಧ್ಯಕ್ಷ ಪಿ ರಮೇಶ್, ಮಾಲೂರು ವಿಜಿ, ಮಣಿ, ಆಟೋ ನಾರಾಯಣಸ್ವಾಮಿ, ಮಂಜು ಸಾರಥಿ, ಸಿಡಿ ನಾಗರಾಜ್, ಸಿ.ವಿ ಚಲಪತಿ, ಅಬ್ಬೇನಹಳ್ಳಿ ರಾಮಕೃಷ್ಣಪ್ಪ, ಮಾಸ್ತಿ ಮಂಜು, ಜಗದೇನಹಳ್ಳಿ ಮಂಜು, ದೊಡ್ಡಕರ್ತರು ಮಂಜು, ನಾರಾಯಣಸ್ವಾಮಿ ದೊಡ್ಡ ಶಿವಾರ ಸುರೇಶ ರೆಡ್ಡಿ , ಅಶೋಕ್ ನಗರ ಶಿವಕುಮಾರ್, ಗೋಪಿ, ರೈತ ಘಟಕ ಅಧ್ಯಕ್ಷ ರಮೇಶ್, ಕಾರ್ಯದರ್ಶಿ ನರೇಶ್, ಹಿರಿಯ ಸಲಹೆಗಾರ ಕೊಪ್ಪಚಂದ್ರು, ಸುಬ್ರಮಣಿ, ಪಾಪರೆಡ್ಡಿ, ಆಟೋ ರಮೇಶ್, ವಕ್ಕಲೇರಿ ಶಿವಕುಮಾರ್, ಅಬ್ಬೇನಹಳ್ಳಿ ರಾಮಕೃಷ್ಣಪ್ಪ. ಹುಂಗೇನಹಳ್ಳಿ ಗೋಪಿ, ಶಿವಣ್ಣ ಸೋಣ್ಣಹಳ್ಳಿ ಅಂಬರೀಶ್, ಮಾಸ್ತಿ ರಾಜು, ನಾಯ್ಡು, ಜಗದೇನಳ್ಳಿ ಮಂಜುನಾಥ್ ಸೇರಿದಂತೆ ಹಲವಾರು ಕಾರ್ಯಕರ್ತರು ಸೇರ್ಪಡೆಯಾದರು.



# ಮಕ್ಕಳಿಗೆ ವಿದ್ಯೆ, ಸಾಧನೆ, ಸಮಾಜದ ಬಗ್ಗೆ ಅರಿವು ಮೂಡಿಸಿ

**ಕೊರಟಗೆರೆ:** ಮಹಿಳೆಯರ ಸಂಪೂರ್ಣ ಸಬಲೀಕರಣವಾಗಿ ಆಕೆ ಎಲ್ಲಾ ಸಮಯದಲ್ಲೂ ಸುರಕ್ಷಿತಳಾದಾಗ ಮಾತ್ರ ವಿಶ್ವಮಹಿಳಾ ದಿನಾಚರಣೆಗೆ ಪರಿ ಪೂರ್ಣ ಅರ್ಥ ಬರುತ್ತದೆ ಎಂದು ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಅಂಬಿಕಾ ತಿಳಿಸಿದರು.

ಅವರು ತಾಲೂಕಿನ ಎಲೆರಾಂಪುರ ಗ್ರಾಮದ ಶ್ರೀ ರೇಣುಕೇಶ್ವರ ಸಮುದಾಯದಲ್ಲಿ ನಡೆದ "ಎಲ್ & ಟಿ ಫೈನಾನ್ಸ್, ಆಕ್ಸಸ್‌ಲೈವ್‌ಲಿಹುಡ್ಸ್" ರವರ ಸಹಯೋಗದಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ ದೇಶ ಅಭಿವೃದ್ಧಿ ಹೊಂದಬೇಕಾದರೆ ಮಹಿಳೆಯರಿಗೆ ಎಲ್ಲಾ ರಂಗದಲ್ಲೂ ಸಮಾನ ಅವಕಾಶ ನೀಡಬೇಕು, ಮಹಿಳೆಯರು ತಾಯಂದಿರಾಗಿ ಮಕ್ಕಳಿಗೆ ಗುಣಮಟ್ಟದ ನೈತಿಕ ಶಿಕ್ಷಣ ನೀಡಬೇಕು, ವಿಶೇಷವಾಗಿ ಪ್ರತಿ ಕುಟುಂಬದಲ್ಲಿ ತಾಯಂದಿರು ಹೆಣ್ಣು ಮಕ್ಕಳ ಬಾಲ್ಯ ಮತ್ತು ಪ್ರೌಡಾ ಬೆಳವಣಿಗೆಯಲ್ಲಿ ಸಂಪೂರ್ಣ ಗಮನ ಹರಿಸಬೇಕು, ಈ ಸಮಯದಲ್ಲಿ ಕೆಲವು ಹೆಣ್ಣುಮಕ್ಕಳು ಲೈಂಗಿಕ ದೌರ್ಜನ್ಯಕ್ಕೂ ಒಳಗಾಗುತ್ತಿವೆ, ಇಂತಹ ಸಂದರ್ಭದಲ್ಲಿ ಮಕ್ಕಳ ಮನಸ್ಥಿತಿ ಕುಗ್ಗಿರುತ್ತದೆ ತಾಯಂದಿರು ಇದರ ಬಗ್ಗೆ ಸೂಕ್ಷ್ಮವಾಗಿ ಅರಿತು ಮಕ್ಕಳ ಜೊತೆ ಇರಬೇಕು, ಪ್ರೌಡಾವಸ್ಥೆಯಲ್ಲಿ ಹೆಣ್ಣು ಮಕ್ಕಳು ಕಾಮುಕರ ಮತ್ತು ಮೋಸಗಾರರ ಬಲಗೆ ಬಿದ್ದು ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ, ಇಂತಹ ಸಂದರ್ಭದಲ್ಲಿ ಮಕ್ಕಳ ಸಂಪೂರ್ಣ ನಿಗಾವನ್ನು ತಾಯಂದಿರು ಮಾಡಬೇಕು, ಮಕ್ಕಳಿಗೆ ವಿದ್ಯೆ, ಸಾಧನೆ, ಸಮಾಜದ ಬಗ್ಗೆ ಅರಿವು ಮೂಡಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದರು.



ಗೊರವನಹಳ್ಳಿಯ ಪ್ರಸಿದ್ದ ಗಾಯಕಿ ಲಕ್ಷ್ಮೀಪ್ರಸಾದ್ ಮಾತನಾಡಿ ಪ್ರಕೃತಿ ನಂತರ ಜೀವವನ್ನು ಸೃಷ್ಟಿ ಮಾಡುವ ಶಕ್ತಿಯನ್ನು ದೇವರು ಮಹಿಳೆಯರಿಗೆ ನೀಡಿದ್ದಾರೆ, ಮಹಿಳೆಯನ್ನು ಆದಿಶಕ್ತಿ, ದೈವತ್ವದ ಪ್ರತಿ ರೂಪವಾಗಿ ನೋಡುವ ಸಂಪ್ರದಾಯ ಇರುವ ನಾವು ಸ್ತ್ರೀಯರನ್ನು ಗೌರವಿಸುವ ಸಂಪ್ರದಾಯ ತಪ್ಪುತ್ತಿದೆ ಎಂದ ಅವರು ಗೊರವನಹಳ್ಳಿ ಕ್ಷೇತ್ರ ಪ್ರಸಿದ್ದವಾಗಬೇಕಾದರೆ ಮಾತೆ ಕಮಲಮ್ಮನವರ ತ್ಯಾಗ ಪರಿಶ್ರಮ ಕಾರಣವಾಗಿದ್ದು ಇಂದು ಗೊರವನಹಳ್ಳಿ ಕ್ಷೇತ್ರ ದೇಶದಾದ್ಯಂತ ಪ್ರಸಿದ್ದವಾಗಿದೆ ಎಂದರು.

ಆಯುಷ್ ವೈದ್ಯಾಧಿಕಾರಿ ಡಾ. ಭವ್ಯ ಮಾತನಾಡಿ ತಾಯಂದಿರು ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಸಾತ್ವಿಕ ಆಹಾರಗಳನ್ನು ನೀಡಬೇಕು, ಮಳಿಕೆ ಕಟ್ಟಿದ ಕಾಳು, ಹಣ್ಣು, ತರಕಾರಿ, ಸೊಪ್ಪು, ಸೇರಿದಂತೆ ಇತರ ಪೌಷ್ಟಿಕ ಆಹಾರ ನೀಡಬೇಕು ಆದರೆ ಹೆಣ್ಣು ಮಕ್ಕಳಿಗೆ ಜಮ್ಸ್ ಆಹಾರಗಳನ್ನು ನೀಡುತ್ತಿರುವುದರಿಂದ ಅವರ ಶರೀರದಲ್ಲಿ ಹಾರ್ಮೋನ್‌ಗಳ ವ್ಯತ್ಯಾಸವಾಗಿ ಕಷ್ಟ ಪಡುವ ಸ್ಥಿತಿ ಉಂಟಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಅದ್ಯಕ್ಷೆ ಗೀತ, ಎಲ್ & ಟಿ ಯ ವ್ಯವಸ್ಥಾಪಕ ಮಲ್ಲೇಶ್, ಮಮತ, ವಸಂತ, ದಾಕ್ಷಾಯಿಣಿ, ರಾಜಶೇಖರಯ್ಯ, ಪುಟ್ಟಮ್ಮ, ಉಮೇಶ್‌ಚಂದ್ರ, ರಾಧಾಮಣಿ, ಶಿವಕುಮಾರ್, ರಶ್ಮಿ, ನಾಗರಾಜು, ಪರುಶುರಾಮ್ ಸೇರಿದಂತೆ ಹಲವರು ಉಪಸ್ಥಿತರು ಹಾಜರಿದ್ದರು.

# ಮೋಹನ್ ಕುಮಾರ್ ಪ್ರಭಾರಿ ನೂತನ ಪೌರಾಯುಕ್ತ

**ಶಿಡ್ಲಘಟ್ಟ:** ನಗರಸಭೆಯ ಪ್ರಭಾರಿ ನೂತನ ಪೌರಾಯುಕ್ತರಾಗಿ ವಿ.ಮೋಹನ್ ಕುಮಾರ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಈಹಿಂದೆಕಾರ್ಯನಿರ್ವಹಿಸುತ್ತಿದ್ದ ಪೌರಾಯುಕ್ತ ಮಂಜುನಾಥ್ ಅವರು ವರ್ಗಾವಣೆಯಾಗಿದ್ದು, ಅವರ ಜಾಗಕ್ಕೆ ವಿ.ಮೋಹನ್ ಕುಮಾರ್ ಅವರು ಅಧಿಕಾರ ವಹಿಸಿಕೊಂಡು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.



ಕುಡಿಯುವ ನೀರು, ಬೀದಿ ದೀಪಗಳ ನಿರ್ವಹಣೆ ಹಾಗು ಸರ್ಕಾರದ ಯೋಜನೆಗಳು ಜನರಿಗೆ ತಲುಪಿಸುವುದರ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಬೇಕೆಂಬ ಅಭಿಲಾಷೆಯಿದೆ ಎಂದು ತಿಳಿಸಿದರು.

ನಗರಸಭೆಯ ಅಧ್ಯಕ್ಷರು, ಜನಪ್ರತಿನಿಧಿ ಗಳು, ಕಛೇರಿ ಸಿಬ್ಬಂದಿ, ಪತ್ರಿಕಾ ಮಾಧ್ಯಮದವರ ಸಹಕಾರದಿಂದ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲಾಗುವುದು ಎಂದರು.

ಸರ್ಕಾರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಟ್ಟಿರುವ ಸ್ವತ್ತುಗಳ ಈ-ಸ್ವತ್ತು ಖಾತೆ ಅಭಿಯಾನ ಮಾಡಿದೆ, ಈಗಾಗಲೇ ಹಂತ ಹಂತವಾಗಿ ಆಯಾ ವಾರ್ಡ್‌ನ ಸ್ವತ್ತುಗಳು ಎ ಮತ್ತು ಬಿ ಖಾತಾಗಳು ನಿಯಮಾನು ಸಾರವಾಗಿ ನಿಗಧಿ ಅವಧಿಯಲ್ಲಿ ಮಾಡಿಕೊಡಲಾಗುವುದು ಇದಕ್ಕೆ ಸಿಬ್ಬಂದಿಗೆ ಈಗಾಗಲೇ ಸೂಚನೆ ನೀಡಲಾಗಿದ್ದು ಸಾರ್ವಜನಿಕರು ಇ- ಖಾತಾ ಅಭಿಯಾನವನ್ನು ಸದುಪಯೋಗಪಡಿಸಿಕೊಂಡು ನಗರಸಭೆ ಯಿಂದ ಖಾತಾ ದಾಖಲೆಗಳು ಪಡೆಯಬಹು ದಾಗಿದೆ ಎಂದು ಹೇಳಿದರು.

ಮುಖ್ಯಾಧಿಕಾರಿಯಾಗಿ ದೇವನಹಳ್ಳಿ ತಾಲ್ಲೂಕಿನ ವಿಜಯಪುರದ ಪುರಸಭೆ, ಶ್ರೀನಿವಾಸಪುರ ಪುರಸಭೆ ಹಾಗು ಕೆಜಿಎಫ್ ಪುರಸಭೆ. ಪೌರಾಯುಕ್ತ ರಾಗಿ ಕರ್ತವ್ಯ ನಿರ್ವಹಿಸಿದ್ದೇನೆ, ಪ್ರಸ್ತುತ ಶಿಡ್ಲಘಟ್ಟ ನಗರಸಭೆಗೆ ಕಾರ್ಯಪಾಲಕ ಅಭಿಯಂತರ (ಪರಿಸರ) ಅಧಿಕಾರಿಯಾಗಿ ಹಾಗು ಈಗ ಪ್ರಭಾರಿ ನಗರಸಭೆ ಪೌರಾಯುಕ್ತರಾಗಿ ಅಧಿಕಾರಿ ವಹಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರು.

# ಸಮುದಾಯದಲ್ಲಿ ಕಾರ್ಯನಿರ್ವಹಿಸುವ ಸಹಾಯಕರ ಸೇವೆಗೆ ಶ್ಲಾಘನೆ



**ಶಿಡ್ಲಘಟ್ಟ:** ಸಮುದಾಯ ಸಹಾಯಕರ ದಿನಾಚರಣೆ ಪ್ರಯುಕ್ತ ಯೂರೋ ಕಿಡ್ಸ್ ಶಾಲೆ ಮತ್ತು ಬಿಕೆಆರ್ ಆಕಾಡೆಮಿಯ ಮಕ್ಕಳು, ಶಿಕ್ಷಕರು ಹಾಗೂ ಸದಸ್ಯರು ಸಮುದಾಯದಲ್ಲಿ ಕಾರ್ಯನಿರ್ವಹಿಸುವ ಸಹಾಯಕರಿಗೆ ಶ್ಲಾಘನೆ ಸಲ್ಲಿಸಿ ಧನ್ಯವಾದ ಅರ್ಪಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆ, ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಕಚೇರಿ, ಜೆಎಂಎಫ್‌ಸಿ ನ್ಯಾಯಾಲಯ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸೇರಿದಂತೆ ಹಲವೆಡೆ ಮಕ್ಕಳಿಂದ ಭಾವನಾತ್ಮಕ ಗೌರವ ವೈದ್ಯರು, ನರ್ಸ್‌ಗಳು ತೊಡುವ ಪೋಷಾಕು ಧರಿಸಿ, ಸ್ಟೆತಾಸ್ಕೋಪ್ ಹಾಕಿಕೊಂಡ ಮಕ್ಕಳ ತಂಡವು ಆಸ್ಪತ್ರೆ ಭೇಟಿ ನೀಡಿದ್ದು ವಿಶೇಷ ಗಮನ ಸೆಳೆಯಿತು. ನಂತರ ನ್ಯಾಯಾಧೀಶರು, ಅಗ್ನಿಶಾಮಕ ಸಿಬ್ಬಂದಿ, ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಭೇಟಿ ಮಾಡಿ ಅವರ ಸೇವೆಯನ್ನು ಶ್ಲಾಘಿಸಿ ಅಭಿನಂದಿಸಿದರು.

ಈ ವೇಳೆ ಮಕ್ಕಳನ್ನು ಅಧಿಕಾರಿಗಳು ಆತ್ಮೀಯವಾಗಿ ಸ್ವಾಗತಿಸಿ, ತಮ್ಮ ಕೆಲಸದ ಮಹತ್ವ ಮತ್ತು ಅನುಭವಗಳನ್ನು ಹಂಚಿಕೊಂಡರು.

ಶಾಲಾ ಮಕ್ಕಳು ಹಾಗೂ ಬಿಕೆಆರ್ ಆಕಾಡೆಮಿ ಸದಸ್ಯರು ಸಮುದಾಯ ಸೇವಕರನ್ನು ಗೌರವಿಸಿದ ಈ ಅನನ್ಯ ಕಾರ್ಯಕ್ಕೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

# ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಲ್ಲ

ನಾಗಮಂಗಲ: ಹೆಣ್ಣು ಜಗದ ಕಣ್ಣು ಪ್ರೀತಿ ವಾತ್ಸಲ್ಯದ ತ್ಯಾಗಮಯಿ ಸ್ಫೂರ್ತಿಗೆ ಒಂದು ಹೆಸರೇ ತಾಯಿರೂಪಿ ಮಹಿಳೆ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಿವಿಲ್ ನ್ಯಾಯಾಧೀಶರಾದ ಯೋಗೇಶ್ ರವರು ಮಾತನಾಡಿದರು.

ಅವರು ನಾಗಮಂಗಲ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಾಗಮಂಗಲ ವಕೀಲರ ಸಂಘದ ಮಹಿಳಾ ವಕೀಲರು ಮತ್ತು ನ್ಯಾಯಾಂಗ ಮಹಿಳಾ ಸಿಬ್ಬಂದಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮಾನಸಿಕಸಾಮರ್ಥ್ಯದಲ್ಲಿ ಪುರುಷನಿಗಿಂತ ಮಹಿಳೆಯದು ಸಿಂಹಪಾಲು ಮಹಿಳೆಯರ ಪಾತ್ರ ನಿಜಕ್ಕೂ ಅದ್ಭುತ. ಜವಾಬ್ದಾರಿ ನಿಭಾಯಿಸುವ ನಿಟ್ಟಿನಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರದಿಂದ ಭಾರತದಲ್ಲಿ ಸ್ವಾತಂತ್ರ್ಯದ ನಂತರ ಮಹಿಳೆಯರು ಮುಂಚೂಣಿಗೆ ಬರಲಾಗಲಿಲ್ಲ. ನಮ್ಮ ದೇಶದಲ್ಲಿ ಬಹಳ ಹಿಂದಿನಿಂದಲೂ ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯ ನೀಡಲಾಗಿದೆ ಹೆಣ್ಣಿಗೆ ಪ್ರಾತಿನಿಧ್ಯ ಸಿಗದಿದ್ದಾಗ ಅವರು ಕೇಳಿ ಪಡೆದುಕೊಳ್ಳಬೇಕು. ಬದಲಾದ ಕಾಲಘಟ್ಟ



ಸನ್ನಿವೇಶವನ್ನು ಅವಲೋಕಿಸಿದಾಗ ಹೆಣ್ಣು ಮಕ್ಕಳು ಸಮಾನತೆ ಎಂಬ ಪದವನ್ನು ತಪ್ಪಾಗಿ ಅರ್ಥೈಸಿ ಅಪರಾಧ ಪ್ರಕರಣಗಳಲ್ಲಿ ಕೂಡ ಭಾಗಿಯಾಗುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿ ಬಾರ್ ಕೌನ್ಸಿಲ್ ನಲ್ಲಿ ಮಹಿಳೆಯರಿಗೆ ಅವಕಾಶ ನೀಡಿ ಎಂದುಹಿರಿಯ ಸಿವಿಲ್ ನ್ಯಾಯಾಧೀಶರಾದ ಯೋಗೇಶ್ ರವರುತಿಳಿಸಿದರು

ನನ್ನ ತಂದೆ ಅನಕ್ಷರಸ್ಥರಾಗಿದ್ದು ತಾಯಿಯು ಕೇವಲ ಐದನೇ ತರಗತಿ ಓದಿದ್ದರೂ ಸಹ ನನ್ನನ್ನು ಕಷ್ಟದಲ್ಲಿ ಉನ್ನತ ವಿಧ್ಯಾಭ್ಯಾಸ ಮಾಡಿಸಿ ನ್ಯಾಯಾಧೀಶರಾಗಿ ಮಾಡಲು ನನ್ನ ತಾಯಿ ಕಾರಣವೆಂದು ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರಾದಸಿದ್ದಪ್ಪಾಜಿ, ಕೆ.ಪಿ, ಭಾವನಾತ್ಮಕವಾಗಿ ನುಡಿದರು.

ಇತಿಹಾಸದಿಂದಲೂ ಮಹಿಳೆಯರ ಕೊಡುಗೆ ಅಪಾರವಾಗಿದೆ ಕುಟುಂಬ ನಿರ್ವಹಣೆಗಾಗಿ ಮಹಿಳೆಯರು ತಮ್ಮ ಜೀವನವನ್ನೇಮುಡಿಪಾಗಿಟ್ಟಿದ್ದಾರೆಹೆಣ್ಣುಮಕ್ಕಳಿಗೆಸಮಾನವಾದ ಹಕ್ಕನ್ನು ನೀಡಿದವರು ಡಾ.ಬಿ.ಆರ್.ಅಂಬೇಡ್ಕರ್ ಮಹಿಳೆಯರಿಗೆ ಪ್ರಾತಿನಿಧ್ಯತೆ ಸಿಗದಿದ್ದಾಗಕಾನೂನಾತ್ಮಕವಾಗಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶ ರಾದ ನರಸಿಂಹಮೂರ್ತಿ ಮಾತನಾಡಿ, ಅಮೆರಿಕಾದಲ್ಲಿ ಶುರುವಾಗಿ ಜರ್ಮನಿಯಲ್ಲಿ ಮುಂಚೂಣಿಗೆ ಬಂದು ಬ್ಯಾನ್ ಮಾಡಲಾಗಿದ್ದರು ನಂತರ ಮಹಿಳಾ ದಿನಾಚರಣೆ ಅಸ್ತಿತ್ವಕ್ಕೆ ಬಂದಿದ್ದು ರೋಚಕ. ಹೆಣ್ಣಿನ ಬಗ್ಗೆ ಮನುವಿನ ಹೇಳಿಕೆಯನ್ನು ತಿರುಚಲಾಗಿದೆ. ಹೆಣ್ಣನ್ನು ಗೌರವಿಸಿದರೆ ದೇಶ ಉತ್ತುಂಗದ ಹಾದಿಯಲ್ಲಿರುತ್ತದೆ ಎಂದರು.

12ನೇ ಶತಮಾನದಿಂದ ಹೆಣ್ಣಿನ ಬಗ್ಗೆ ಹೊಗಳಿಕೆಯ ಮಾತುಗಳಿವೆ. 1725 ರಲ್ಲಿ ಮರಾಠ ರಾಣಿ ಹೋಲ್ಕರ್ ಸಮಾನತೆ ಪ್ರತಿಪಾದಿಸಿದ್ದರು. ಚಾಂದ್ ಬೀಬಿ ಕೂಡ ಸಾಮ್ರಾಜ್ಯ ಆಳಿದ್ದಾರೆ. ಲಕ್ಷ್ಮೀ ಬಾಯಿ ಕಿತ್ತೂರು ರಾಣಿ ಚೆನ್ನಮ್ಮ, ಸರೋಜಿನಿ ನಾಯ್ಡು ಇವರೆಲ್ಲ ಮಹಿಳೆಯರ ಸಾಧನೆಗೆ ಸ್ಫೂರ್ತಿ. ಮಾಜಿ ಪ್ರಧಾನಿ ಇಂದಿರಾಗಾಂಧಿ ಕೂಡ ಮಹಿಳೆಯರ ಸಾಧನೆಗೆ ಹೊಸ ಮೈಲುಗಲ್ಲಾಗಿ ಇತಿಹಾಸದ ಪುಟಗಳಲ್ಲಿ ರಾರಾಜಿಸಿದ್ದಾರೆ. ಮಹಿಳೆಯರನ್ನು ಗೌರವಿಸುವುದು ಒಂದು ದಿನಕ್ಕೆ ಸೀಮಿತವಾಗಬಾರದು ಎಂದರು.

ಈ ಸಮಯದಲ್ಲಿ ಹಿರಿಯ ವಕೀಲೆ ಮಂಜುಳಾ ಹಾಗೂ ಹಿರಿಯ ನ್ಯಾಯಾಂಗ ಮಹಿಳಾ ಸಿಬ್ಬಂದಿ ಡಿ.ನೇತ್ರಾವತಿ ಯವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಮಹದೇವ ಉಪಾಧ್ಯಕ್ಷ ಉವೆಸುಲ್ ಹಡೇನಹಳ್ಳಿ, ವಕಿಲರಾದ ಕೆಂಪೇಗೌಡ, ಅಲ್ಲಮಪ್ರಭು ಸೇರಿದಂತೆ ವಕೀಲರು ಉಪಸ್ಥಿತರಿದ್ದರು.

# 400ಕ್ಕೂ ಹೆಚ್ಚು ರೌಡಿ ಶೀಟರ್‌ಗಳ ಪೆರೇಡ್



ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 400 ಕ್ಕೂ ಹೆಚ್ಚು ರೌಡಿ ಶೀಟರ್ ಗಳ ಪಟ್ಟಿ ಇದ್ದು ಅವರಲ್ಲರನ್ನೂ ಇಂದು ಜಿಲ್ಲಾ ಪೊಲೀಸ್ ವರಿಷ್ಠಾದಿಕಾರಿಗಳ ಮೈಧಾನದಲ್ಲಿ ಪೆರೇಡ್ ಮಾಡಿಸಲಾಯಿತು.ಬೇರೆ ಬೇರೆ ಪ್ರಕರಣಗಳಲ್ಲಿ ರೌಡಿ ಶೀಟರ್ ಪಟ್ಟಿಗೆ ಸೇರಿದ ಎಲ್ಲರಿಗೂ ಎಸ್.ಪಿ. ಕುಶಾಲ್ ಚೌಕ್ಸೆ ಖಡಕ್ ವಾರ್ನಿಂಗ್ ನೀಡಿ ಇನ್ಮುಂದು ಯಾರಾದ್ರೂ ಸರಿ ಯಾವುದೆ ಸಮಾಜ ಘಾತುಕ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರೆ ಅಂತವರನ್ನ ಗಡೀಪಾರು ಮಾಡುವುದಾಗಿ ಎಚ್ಚರಿಕೆ ನೀಡಿದರು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಲವು ಅಘರಾಧ ಪ್ರಕರಣಗಳಲ್ಲಿ ಬಾಗಿಯಾಗಿ ಸಮಾಜ ಘಾತುಕ ಘಟನೆಗಳಲ್ಲಿ ತೊಡಗಿಸಿಕೊಂಡು ಜನರಿಗೆ ತೊಂದರೆಕೊಡುತಿದ್ದ ಸುಮಾರು 400ಕ್ಕೂ ಹೆಚ್ಚು ರೌಡಿಶೀಟರ್ ಗಳನ್ನ ಜಿಲ್ಲಾ ಪೊಲೀಸ್ ಮೈಧಾನದಲ್ಲಿ ಪೆರೇಡ್ ಮಾಡಿಸಿದರು.

ಕಾರಣಾಂತರಗಳಿಂದ ರೌಡಿಶೀಟರ್ ಆಗಿದ್ದೀರಾ ನಿಮ್ಮ ಕ್ಯಾರೆಕ್ಟರ್ ಬದಲಾಯಿಸಿಕೊಳ್ಳಿ ನಿಮ್ಮ ನಿಮ್ಮ ಕೆಲಸವನ್ನ ನೀವು ಮಾಡಿ ಇನ್ನೂ ಏನಾದ್ರೂ ಬಾಲ ಬಿಚ್ಚಿದರೆ ಗಡೀ ಪಾರು ಮಾಡುವ ಎಚ್ಚರಿಕೆ ನೀಡಿದರು.

ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು ಜಿಲ್ಲೆಯಾಧ್ಯಂತ ನಾಲಕ್ಕು ನೂರಕ್ಕೂ ಹೆಚ್ಚು ರೌಡಿ ಶೀಟರ್ ಗಳ ಪಟ್ಟಿ ಇದೆ ಅವರ ಪೈಕಿ 280 ಜನ ಮಾತ್ರ ಆಕ್ಟೀವ್ ಆಗಿದ್ದು ಉಳಿದವರು ತಮ್ಮ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ ಹಾಗೆ ಬದಲಾದ 70 ಜನ ರೌಡಿಶೀಟರ್ ಗಳನ್ನ ರೌಡಿ ಪಟ್ಟದಿಂದ ಕೈಬಿಡಲಾಗಿದೆ ಈಗಲೂ ಬದಲಾದವರನ್ನ ರೌಡಿ ಶೀಟರ್ ಗಳಿಂದ ಕೈ ಬಿಡಲು ಜಿಲ್ಲಾದಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದರು.

ಈ ವೇಳೆ ಅಡಿಷನಲ್ ಪೋಲೀಸ್ ವರಿಷ್ಠಾದಿಕಾರಿ ಇಮಾಮ್ ಕಾಸಿಂ ,ಡಿವೈ ಎಸ್ ಪಿ ಶಿವಕುಮಾರ್ ವೃತ್ತ ನಿರೀಕ್ಷಕರು,ಅರಕ್ಷಕ ಉಪನಿರೀಕ್ಷಕರು ಇದ್ದರು.

# ರಾಜ್ಯ ಸರಕಾರಿ ನೌಕರರ ಸಂಘದ ಕಾರ್ಯದರ್ಶಿಯಾಗಿ ಪಿ.ಆರ್.ಸುನೀಲ್




ಚಿಕ್ಕಬಳ್ಳಾಪುರ: ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ಜಿಲ್ಲಾ ಸರಕಾರಿ ನೌಕರದ ಸಂಘದ ಕಾರ್ಯಕಾರಿ ನಿರ್ದೇಶಕ ತಾಲೂಕಿನ ಪೆರೇಸಂದ್ರ ಗ್ರಾಮದ ಪಿ.ಆರ್. ಸುನಿಲ್ ಅವರನ್ನು ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇಮಕ ಮಾಡಿದ್ದಾರೆ.

ತಾಲೂಕಿನ ಪರೇಸಂದ್ರ ಗ್ರಾಮದ ಪಿ.ಆರ್.ಸುನಿಲ್ ಸರಕಾರಿ ನೌಕರರ ಪರ ಸಂಘಟನಾತ್ಮಕ ಕಾರ್ಯ ಚಟುವಟಿಕೆಗಳು ಹೋರಾಟಗಳಲ್ಲಿ ಸಕ್ರಿಯ ಪಾಲ್ಗೊಂಡಿದ್ದು ವಿವಿಧ ಸರಕಾರಿ ಶಾಲೆಗಳಿಗೆ ದಾನಿಗಳಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ್ದಾರೆ.

ಶಿಕ್ಷಕರ ಹಾಗೂ ನೌಕರರಿಗೆ ಸರಕಾರದಿಂದ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.ಕಾರ್ಯಕ್ರಮಗ ಳ ಆಯೋಜನೆಯಲ್ಲಿ ನಿಪುಣತೆ, ಇವೆಲ್ಲವನ್ನು ಗಮನಿಸಿ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಾಕ್ಷರಿ ಹಾಗೂ ರಾಜ್ಯ ಪದಾಧಿಕಾರಿಗಳು ಸುನಿಲ್ ಅವರನ್ನು ರಾಜ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದಾರೆ.

ರಾಜ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರಿಗೆ ಪಿ.ಆರ್.ಸುನಿಲ್ ಅವರು ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

# ದಾಸರ ಪದಗಳ ಗಾಯನ

ಬೆಂಗಳೂರು: ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಮಾರ್ಚ್ 13, ಗುರುವಾರ ಸಂಜೆ 5-30ಕ್ಕೆ ಕು॥ ಅಹಿಕಾ ನಾಗದೀಪ್ ಮತ್ತು ಸಂಗಡಿಗರಿಂದ ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-41



# "ಹರಿದಾಸ ನಮನ"

ಬೆಂಗಳೂರು : ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ವಿಚಾರಣಾ ಕರ್ತರಾದ ಶ್ರೀ ಗಿರಿರಾಜಾ ಚಾರ್ಯರ ನೇತೃತ್ವದಲ್ಲಿ



ಮಾ.13, ಗುರುವಾರ ಸಂಜೆ 7-00 ಗಂಟೆಗೆ ಶ್ರೀಮತಿ ಪದ್ಮಶ್ರೀ ಪ್ರಸಾದ್ ಅವರಿಂದ "ಹರಿದಾಸ ನಮನ" ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಕೀ-ಬೋರ್ಡ್ ವಾದನದಲ್ಲಿ ಶ್ರೀ ಅಮಿತ್ ಶರ್ಮಾ ಮತ್ತು ತಬಲಾ ವಾದನದಲ್ಲಿ ಶ್ರೀ ಸರ್ವೋತ್ತಮ ಸಹಕರಿಸಲಿದ್ದಾರೆ ಎಂದು ಶ್ರೀ ಗೊಗ್ಗಿ ಕೃಷ್ಣಾಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ ಬೆಂಗಳೂರು.

# ರೇಣುಕಾಚಾರ್ಯ ಜಯಂತಿ

**ಕುಕನೂರು:** ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ನವೋದಯ ವಿದ್ಯಾಲಯದ ಹತ್ತಿರ ಶ್ರೀರೇಣುಕಾಚಾರ್ಯ ವೃತ್ತಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಣೆ ಮಾಡಲಾಯಿತು.

ಯಂತಿ ಕಾಯಕ್ರಮ ಜಂಗಮ ಸಮಾಜದ ವತಿಯಿಂದ ಜರುಗಿತು. ಕಾರ್ಯಕ್ರಮ ಉದ್ದೇಶಿಸಿ ತಾ.ಪಂ. ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಮಾತನಾಡಿ, ಶರಣರು ಹಾಗೂ ಮಹಾತ್ಮರು ಪ್ರತಿಯೊಬ್ಬ ಮಾನವ ಕಲ್ಯಾಣಕ್ಕಾಗಿ ಉತ್ತಮ ಸಂದೇಶ ನೀಡಿದ್ದಾರೆ,ಪ್ರತಿಯೊಬ್ಬರೂ ಜಾತಿ ಮತ ಪಂಥ ಎನ್ನದೆ ಎಲ್ಲರೂ ಒಗ್ಗೂಡಿ ಮಹಾತ್ಮರ ಆದಶ9 ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಇದರಿಂದ ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನ ಸಾಗಲಿ ಎಂದು ತಿಳಿಸಿದರು.

ಮುಖಂಡರಾದ ಉದ್ಯಮಿ ಅನಿಲ ಆಚಾರ, ಗುದ್ನೆಯ್ಯ ದೇವಗಣಮಠ, ಶಿವಕುಮಾರ್ ನಾಗಲಾಪುರ, ವೀರಯ್ಯ ದೇವಗನಮಠ, ಸಿದ್ಧಲಿಂಗಯ್ಯ ಬಂಡಿ, ಬಸವರಾಜ್ ಹಾಲಕೇರಿ,ಸಿದ್ದು ಉಳ್ಳಾಗಡ್ಡಿ,ವಿನಾಯಕ ಸರಗನಚಾರ್, ಮಹೇಶ್ ಕಲ್ಮಠ, ಸೋಮಲಿಂಗಯ್ಯ ಹಿರೇಮಠ, ರುದ್ರಯ್ಯ, ಚನ್ನಬ ಸಯ್ಯ ದೂಪದ, ಈರಯ್ಯ ಕುರ್ತಕೋಟಿ. ಈ ಶಯ್ಯ ಶಿರೂರು ಮಠ, ಕರಿಬಸಯ್ಯ ಬೀನ್ನಾಳ, ಡಾ. ಸಿ.ಎಂ. ಹಿರೇಮಠ ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ವತಿಯಿಂದ ಪ್ರಸಿದ್ಧವಾದ ಬಾಗಲಕೋಟೆ ಹಲಗೇ ಮೇಳ ಕಾರ್ಯಕ್ರಮವನ್ನು ವಿ ವಿ ಎಸ್ ಸರ್ದಾರ್ ಪಟೇಲ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಾಸಕರು ಹಾಗೂ ಮಾಜಿ ಸಚಿವರಾದ ಕೆ ಗೋಪಾಲಯ್ಯ ರವರು ಹಲಗೆ ಮೇಳವನ್ನು ಬಾರಿಸುವ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಬಿಜೆಪಿ ಮುಖಂಡರಾದ ಜಗದೀಶ್ ಹಿರೇಮನಿರವರು ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಎಸ್ ಹರೀಶ್ , ಬಿ ಡಿ ಶ್ರೀನಿವಾಸ್ , ವೆಂಕಟೇಶ್ ಮೂರ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು ಹಾಗೂ ಬಾಗಲಕೋಟೆ ಮತ್ತು ಬೆಂಗಳೂರಿನ ನೂರಾರು ಕಲಾಭಿಮಾನಿಗಳು ಹಲಗೆ ಮೇಳವನ್ನು ನೋಡಿ ಸಂಭ್ರಮಿಸಿದರು.

# 266 ಭಾರತೀಯರ ರಕ್ಷಣೆ, ಐಎಎಫ್ ವಿಮಾನದಲ್ಲಿ ಸ್ವದೇಶಕ್ಕೆ ವಾಪಸ್



**ನವದೆಹಲಿ:** ಉದ್ಯೋಗ ಕೊಡಿಸುವ ನೆಪದಲ್ಲಿ ಕರೆದೊಯ್ದು ಆಗ್ನೇಯ ಏಷ್ಯಾ ದೇಶಗಳಲ್ಲಿ ಸೈಬರ್‌ಕ್ರೈಂ ಕೇಂದ್ರದಲ್ಲಿ ಕೆಲಸಕ್ಕಾಗಿ ಇರಿಸಿಕೊಂಡಿದ್ದ 266ಕ್ಕೂ ಹೆಚ್ಚು ಭಾರತೀಯರನ್ನು ಬಿಡುಗಡೆಗೊಳಿಸಿ ಭಾರತಕ್ಕೆ ಕರೆತರಲಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಈ ಕುರಿತು ಎಕ್ಸ್ ತಾಣದಲ್ಲಿ ಪೋಸ್ಟ್ ಮಾಡಿರುವ ಸಚಿವಾಲಯದ ವಕ್ತಾರ ರಣ್‌ಧೀರ್ ಜೈಸ್ವಾಲ್, "ಐಎಎಫ್ ವಿಮಾನದಲ್ಲಿ 266 ಭಾರತೀಯರನ್ನು ಭಾರತ ಸರ್ಕಾರ ಸುರಕ್ಷಿತವಾಗಿ ಕರೆತಂದಿದೆ. ಇವರನ್ನೆಲ್ಲಾ ಆಗ್ನೇಯ ಏಷ್ಯಾ ದೇಶಗಳಲ್ಲಿನ ಸೈಬರ್ ಕ್ರೈಂ ಕೇಂದ್ರಗಳಿಂದ ಬಿಡುಗಡೆ ಮಾಡಲಾಗಿದೆ. ಸೋಮವಾರ ಇದೇ ರೀತಿ 283 ಭಾರತೀಯರನ್ನು ಕರೆತರಲಾಗಿತ್ತು. ಮಯಾನ್ಮಾರ್ ಮತ್ತು ಥೈಲ್ಯಾಂಡ್ ಸರ್ಕಾರದ ಜೊತೆಗೆ ಭಾರತದ ರಾಯಭಾರ ಕಚೇರಿಗಳು ಭಾರತೀಯರ ಸುರಕ್ಷಿತ ಬಿಡುಗಡೆ ಹಾಗೂ ಅವರನ್ನು ಸ್ವದೇಶಕ್ಕೆ ಕರೆತರುವ ಕುರಿತು ಕೆಲಸ ಮಾಡುತ್ತಿದೆ" ಎಂದು ಮಾಹಿತಿ ನೀಡಿದ್ದಾರೆ.

ಮಾರ್ಚ್ 10ರಂದು ಕೂಡ ಈ ಕುರಿತು ತಿಳಿಸಿದ್ದ ವಿದೇಶಾಂಗ ಇಲಾಖೆ, ಮಯಾನ್ಮಾರ್ ಸೇರಿದಂತೆ ಆಗ್ನೇಯ ಏಷ್ಯಾ ದೇಶಗಳಲ್ಲಿ ನಕಲಿ ಉದ್ಯೋಗದ ಆಮಿಷವೊಡ್ಡಿ ಕರೆದೊಯ್ದಿರುವ ಭಾರತೀಯ ಪ್ರಜೆಗಳನ್ನು ಸುರಕ್ಷಿತವಾಗಿ ಬಿಡುಗಡೆಗೊಳಿಸಿ, ಕರೆತರುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಎಂದಿತ್ತು.

ಭಾರತದಿಂದ ನಕಲಿ ಉದ್ಯೋಗ ಆಮಿಷದ ನೆಪವೊಡ್ಡಿ ಕರೆದೊಯ್ದಿರುವ ಇವರನ್ನೆಲ್ಲಾ ಒತ್ತಾಯಪೂರ್ವಕವಾಗಿ ಮಯನ್ಮಾರ್–ಥೈಲ್ಯಾಂಡ್ ಗಡಿಗಳಲ್ಲಿ ವಂಚನೆ ಪ್ರಕರಣದಲ್ಲಿ ಕಾರ್ಯನಿರ್ವಹಿಸಲು ಹಾಗೂ ಸೈಬರ್‌ಕ್ರೈಂ ಪ್ರಕರಣದಲ್ಲಿ ತೊಡಗಿಸಲಾಗಿದೆ ಎಂದು ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಮಯಾನ್ಮಾರ್ ಮತ್ತು ಥೈಲ್ಯಾಂಡ್‌ನಲ್ಲಿನ ಭಾರತೀಯ ರಾಯಭಾರಿಗಳು ಸ್ಥಳೀಯ ಅಧಿಕಾರಿಗಳ ಸಹಯೋಗದಿಂದ ಇಂದು 283 ಭಾರತೀಯರನ್ನು ರಕ್ಷಿಸಿದ್ದು, ಅವರನ್ನು ಥೈಲ್ಯಾಂಡ್‌ನಲ್ಲಿನ ಮೆ ಸೋಟ್‌ನಿಂದ ಐಎಎಫ್ ವಿಮಾನದ ಮೂಲಕ ಕರೆತರಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿತ್ತು.

ಈ ರೀತಿಯ ಉದ್ಯೋಗ ವಂಚನೆ ಪ್ರಕರಣದ ಬಗ್ಗೆ ಜನರ ಎಚ್ಚರಿಕೆ ವಹಿಸುವಂತೆ ಸರ್ಕಾರ ತಿಳಿಸಿದೆ. ವಿದೇಶದಲ್ಲಿ ಉದ್ಯೋಗಕ್ಕೆ ಹೋಗುವ ಮುನ್ನ ನೇಮಕಾತಿ ಏಜೆಂಟ್ ಮತ್ತು ಕಂಪನಿಗಳ ಕುರಿತು ಪೂರ್ವ ಪರಿಶೀಲನೆ ನಡೆಸುವುದು ಅಗತ್ಯ ಎಂದು ಸಲಹೆ ನೀಡಿದೆ.

# ಹೋಳಿ ಹಬ್ಬದಂದು ಸೌಹಾರ್ದಯುತವಾಗಿ ವರ್ತಿಸಿ

**ಉತ್ತರ ಪ್ರದೇಶ:** ರಂಜಾನ್ ಮಾಸದ ಶುಕ್ರವಾರದಂದು ನಡೆಯಲಿರುವ ಹೋಳಿ ಹಬ್ಬದ ಆಚರಣೆಯ ಸಮಯದಲ್ಲಿ ಹಬ್ಬವು ಸೌಹಾರ್ದ ಹಾಗೂ ಶಾಂತಿಯುತವಾಗಿ ನಡೆಯುವಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಅಲಿಗಢದ ಮುಖ್ಯ ಮುಫ್ತಿ ಖಾಲಿದ್ ಹಮೀದ್ ಮುಸ್ಲಿಮರಿಗೆ ಮನವಿ ಮಾಡಿದ್ದಾರೆ.




ಸುದ್ದಿಗಾರರೊಂದಿಗೆ ಮಾತನಾಡಿದ ಮುಫ್ತಿ ಹಮೀದ್, "ಮುಸ್ಲಿಮರು ಹೊಂದಾಣಿಕೆಯ ಮನೋಭಾವನೆಯನ್ನು ಅಳವಡಿಸಿಕೊಳ್ಳಬೇಕು. ಶುಕ್ರವಾರದ ಪ್ರಾರ್ಥನೆಗೆ ಹೋಗುವ ಸಮಯ ದಲ್ಲಿ ಹೋಳಿಯ ಬಣ್ಣದಾಟ ನಡೆಯು ತ್ತಿರುವ ಪ್ರದೇಶಗಳ ಮೂಲಕ ಹಾದುಹೋಗು ವುದನ್ನು ತಪ್ಪಿಸಬೇಕು." ಎಂದು ಮನವಿ ಮಾಡಿದರು.

ಹಿಂದೂ ಹಾಗೂ ಮುಸಲ್ಮಾನರು ಒಟ್ಟಾಗಿ ವಾಸಿಸುವ ಪ್ರದೇಶಗಳಲ್ಲಿ ಯಾವುದೇ ಸಂಭಾವ್ಯ ಘರ್ಷಣೆಯನ್ನು ತಪ್ಪಿಸಲು ಪ್ರಾರ್ಥನೆಯನ್ನು ಒಂದು ಗಂಟೆ ವಿಳಂಬವಾಗಿ ಆರಂಭಿಸುವಂತೆ ಅವರು ಮಸೀದಿಗಳ ಇಮಾಮ್‌ಗಳಿಗೆ ಇದೇ ಸಂದರ್ಭದಲ್ಲಿ ಕರೆ ನೀಡಿದರು. ಸಣ್ಣ ಪುಟ್ಟ ಹೊಂದಾಣಿಕೆಗಳೊಂದಿಗೆ ಮುಸ್ಲಿಂ ಸಮುದಾಯವು ಹೋಳಿಯನ್ನು ಶಾಂತಿಯುತವಾಗಿ ಆಚರಿಸಲು ಕೊಡುಗೆ ನೀಡಬಹುದು ಎಂದು ಅವರು ಒತ್ತಿ ಹೇಳಿದರು.

# ಮಾರಿಷಸ್ ಮಿನಿ ಭಾರತ: ಪ್ರಧಾನಿ ಮೋದಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮಾರಿಷಸ್‌ನಲ್ಲಿರುವ ಭಾರತೀಯ ಸಮುದಾಯವನ್ನು ಕೈಮುಗಿದು ಸ್ವಾಗತಿಸಿದರು. "ನಾವು ಒಂದೇ ಕುಟುಂಬದವರಂತೆ. ಮಾರಿಷಸ್ ಮಿನಿ ಭಾರತವಿದ್ದಂತೆ. ನಾನು 10 ವರ್ಷಗಳ ಹಿಂದೆ ಇದೇ ದಿನದಂದು ಮಾರಿಷಸ್‌ಗೆ ಭೇಟಿ ನೀಡಿದ್ದೆ. ಹೋಳಿಯ ಒಂದು ವಾರದ ನಂತರ ನಾನು ಬಂದಿದ್ದೆ. ಈ ಬಾರಿ, ನಾನು ಹೋಳಿಯ ಬಣ್ಣಗಳನ್ನು ನನ್ನೊಂದಿಗೆ ಭಾರತಕ್ಕೆ ತೆಗೆದುಕೊಂಡು ಹೋಗುತ್ತೇನೆ" ಎಂದು ಮೋದಿ ನೆನಪಿಸಿಕೊಂಡರು. "ನಾನು ಮಾರಿಷಸ್‌ಗೆ ಬಂದಾಗಲೆಲ್ಲಾ, ಇಲ್ಲಿ ಇರುವವರೆಲ್ಲ ನನ್ನ ಸ್ವಂತದವರೆಂಬಂತೆ ಭಾಸವಾಗುತ್ತದೆ" ಎಂದು ಅವರು ಹೇಳಿದ್ದಾರೆ.

ಭಾರತದ ಪಶ್ಚಿಮ ಭಾಗದಲ್ಲಿ ಸಿಹಿತಿಂಡಿಗಳಿಗಾಗಿ ಮಾರಿಷಸ್‌ನಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿದ್ದ ಕಾಲವಿತ್ತು. ಬಹುಶಃ ಸಕ್ಕರೆಯನ್ನು ಗುಜರಾತಿಯಲ್ಲಿ 'ಮೊರಾಸ್' ಎಂದೂ ಕರೆಯಲು ಇದು ಒಂದು ಕಾರಣವಾಗಿರಬಹುದು. ಕಾಲ ಕಳೆದಂತೆ, ಭಾರತ ಮತ್ತು ಮಾರಿಷಸ್ ನಡುವಿನ ಸಂಬಂಧಗಳ ಮಾಧುರ್ಯ ಹೆಚ್ಚುತ್ತಲೇ ಇದೆ. "ನಾನು ಮಾರಿಷಸ್‌ಗೆ ಬಂದಾಗಲೆಲ್ಲಾ ನಾನು ನನ್ನ ಸ್ವಂತ ಜನರ ನಡುವೆ ಬಂದಂತೆ ಭಾಸವಾಗುತ್ತದೆ. ಇಲ್ಲಿನ ಗಾಳಿ, ಮಣ್ಣು



ಮತ್ತು ನೀರಿನಲ್ಲಿ ಆತ್ಮೀಯತೆಯ ಭಾವನೆ ಇದೆ. ನಮ್ಮ ಪೂರ್ವಜರ ರಕ್ತ ಮತ್ತು ಬೆವರು ಇಲ್ಲಿನ ಮಣ್ಣಿನಲ್ಲಿ ಬೆರೆತಿದೆ" ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗೂಲಂ ಅವರು ಪ್ರಧಾನಿ ಮೋದಿಗೆ ತಮ್ಮ ಅತ್ಯುನ್ನತ ಪ್ರಶಸ್ತಿ 'ದಿ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಅಂಡ್ ಕೀ ಆಫ್ ದಿ ಹಿಂದೂ ಮಹಾಸಾಗರ'ವನ್ನು ಘೋಷಿಸಿದರು."ಪ್ರಧಾನಿ ನವೀನ್ ಮತ್ತು ಮಾರಿಷಸ್‌ನ ಜನರು ನನಗೆ ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಲು ನಿರ್ಧರಿಸಿದ್ದಾರೆ. ನಿಮ್ಮ ನಿರ್ಧಾರವನ್ನು ನಾನು ವಿನಮ್ರವಾಗಿ ಸ್ವೀಕರಿಸುತ್ತೇನೆ. ಇದು ಭಾರತ ಮತ್ತು ಮಾರಿಷಸ್ ನಡುವಿನ ಐತಿಹಾಸಿಕ ಸಂಬಂಧಗಳ ಗೌರವ" ಎಂದು ಪ್ರಧಾನಿ ಮೋದಿ ಧನ್ಯವಾದ ತಿಳಿಸಿದ್ದಾರೆ.

ಭಾರತ ಮತ್ತು ಮಾರಿಷಸ್ ಸಂಬಂಧದ ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ, "ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾ ಸಮಾರಂಭ ನಡೆದು ಭಾರತದಲ್ಲಿ ಆಚರಣೆಗಳು ನಡೆಯುವಾಗ ಮಾರಿಷಸ್‌ನಲ್ಲಿಯೂ ಇದೇ ರೀತಿಯ ಆಚರಣೆಗಳನ್ನು ಕಂಡಿದ್ದೇವೆ" ಎಂದು ಹೇಳಿದರು.

ಮಾರಿಷಸ್ ಕೇವಲ ನಮ್ಮ ಪಾಲುದಾರ ರಾಷ್ಟ್ರವಲ್ಲ. ನಮಗೆ ಮಾರಿಷಸ್ ಎಂದರೆ ಒಂದು ಕುಟುಂಬ. ಈ ಬಾಂಧವ್ಯ ಆಳವಾದ ಮತ್ತು ಬಲವಾದದ್ದು. ಮಾರಿಷಸ್ ಭಾರತವನ್ನು ವಿಶಾಲ ಜಾಗತಿಕ ದಕ್ಷಿಣಕ್ಕೆ ಸಂಪರ್ಕಿಸುವ ಸೇತುವೆಯೂ ಆಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಇಂದು, ಮಾರಿಷಸ್‌ಗೆ ತಮ್ಮ ಎರಡು ದಿನಗಳ ಭೇಟಿಯ ಮೊದಲ ದಿನದಂದು, ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಿ ನವೀನ್‌ಚಂದ್ರ ರಾಮಗೂಲಮ್ ಅವರನ್ನು ಭೇಟಿ ಮಾಡಿದರು. ಪ್ರಧಾನಿ ಮೋದಿ ಅವರು ಮೊದಲು ಸರ್ ಸೀವೂಸಗೂರ್ ರಾಮಗೂಲಮ್ ಸಸ್ಯೋದ್ಯಾನಕ್ಕೆ ಭೇಟಿ ನೀಡಿದರು. ಅಲ್ಲಿ ಇಬ್ಬರೂ ಪ್ರಧಾನ ಮಂತ್ರಿಗಳು ಒಟ್ಟಾಗಿ 'ಏಕ್ ಪೆಡ್ ಮಾ ಕೆ ನಾಮ್' ಅಭಿಯಾನದ ಅಡಿಯಲ್ಲಿ ಒಂದು ಮರವನ್ನು ನೆಟ್ಟರು.

# ಮತ್ತೆ ಸೇನಾ ನೆರವು ನೀಡಲು ಮುಂದಾದ ಟ್ರಂಪ್

**ಸೌದಿ ಅರೇಬಿಯಾ:** ರಷ್ಯಾ ಜೊತೆಗಿನ 30 ದಿನಗಳ ಕದನ ವಿರಾಮಕ್ಕೆ ಉಕ್ರೇನ್ ಸಮ್ಮತಿಸಿದ ಬೆನ್ನಲ್ಲೇ ಉಕ್ರೇನ್‌ಗೆ ನೀಡುತ್ತಿದ್ದ ಸೇನಾ ನೆರವಿನ ಮೇಲೆ ವಿಧಿಸಿದ್ದ ತಾತ್ಕಾಲಿಕ ಸ್ಥಗಿತ ಕ್ರಮವನ್ನು ಟ್ರಂಪ್ ಆಡಳಿತ ಹಿಂಪಡೆದಿದೆ.



ಸೌದಿ ಅರೇಬಿಯಾದಲ್ಲಿ ಮಂಗಳವಾರ ನಡೆದ ಮಹತ್ವದ ಮಾತುಕತೆಯ ನಂತರ ಈ ಬೆಳವಣಿಗೆ ನಡೆದಿದೆ.

ರಷ್ಯಾದೊಂದಿಗೆ ಯುದ್ಧ ಕೊನೆಗೊಳಿಸುವ ಕುರಿತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲನ್ಸ್ಕಿ ಮಾತುಕತೆಗೆ ಮುಂದಾಗದೇ ಇದ್ದುದಕ್ಕೆ ಟ್ರಂಪ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ವಿಚಾರವಾಗಿ ಇಬ್ಬರ ನಡುವೆ ವಾಗ್ವಾದವೂ ಏರ್ಪಟ್ಟಿತ್ತು. ಉಕ್ರೇನ್‌ಗೆ ನೀಡುತ್ತಿದ್ದ ಎಲ್ಲಾ ಸೇನಾ ನೆರವನ್ನು ತಾತ್ಕಾಲಿಕವಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಸ್ಥಗಿತಗೊಳಿಸಿದ್ದರು. ಇದೀಗ ಟ್ರಂಪ್ ಕ್ರಮಕ್ಕೆ ಮಣಿದಿರುವ ಝೆಲನ್ಸ್ಕಿ ಕದನ ವಿರಾಮಕ್ಕೆ ಒಪ್ಪಿದ್ದಾರೆ.

ಜೆದ್ದಾದಲ್ಲಿ ನಡೆದ ಮಾತುಕತೆಗೆ ಅಮೆರಿಕ ನಿಯೋಗದ ನೇತೃತ್ವ ವಹಿಸಿದ್ದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, "ವಾಷಿಂಗ್ಟನ್ ಕದನ ವಿರಾಮದ ಪ್ರಸ್ತಾಪವನ್ನು ಕ್ರೆಮ್ಲಿನ್‌ಗೆ (ರಷ್ಯಾ) ಸಲ್ಲಿಸಲಿದೆ. ಯುದ್ಧ ನಿಲ್ಲಿಸಲು ಉಕ್ರೇನ್ ಸಿದ್ಧವಾಗಿದೆ. ರಷ್ಯಾದಿಂದಲೂ ಇದೇ ನಿರೀಕ್ಷೆ ಇದೆ. ಇದಕ್ಕೆ ಇಲ್ಲ ಅಥವಾ ಹೌದು ಎಂದು ಹೇಳುವುದು ರಷ್ಯಾ ಮೇಲೆ ನಿಂತಿದೆ. ಅವರು ಒಂದು ವೇಳೆ ಇಲ್ಲ ಎಂದರೆ, ಶಾಂತಿಗೆ ಇರುವ ಅಡ್ಡಿ ಏನು ಎಂಬುದು ತಿಳಿಯಲಿದೆ ಎಂದರು.

ಸುಮಾರು 8 ಗಂಟೆಗಳ ಕಾಲ ಕದನ ವಿರಾಮದ ಕುರಿತು ಚರ್ಚೆ ನಡೆದಿದೆ. ಇದಾದ ಬಳಿಕ ಮಾತನಾಡಿರುವ ಟ್ರಂಪ್, "ಮುಂದಿನ ಕೆಲವು ದಿನದಲ್ಲಿ ಒಪ್ಪಂದ ಅಂತಿಮಗೊಳ್ಳಲಿದೆ. ಉಕ್ರೇನ್‌ಗಿಂತ ರಷ್ಯಾದ ಜೊತೆ ವ್ಯವಹರಿಸುವುದು ಸುಲಭ ಎಂದು ನಾನು ತಿಳಿದಿದ್ದೇನೆ. ಆದರೆ, ಉಕ್ರೇನ್ ಪೂರ್ಣ ಕದನ ವಿರಾಮಕ್ಕೆ ಒಪ್ಪಿದರೆ ಒಳ್ಳೆಯದು" ಎಂದು ಹೇಳಿದರು.

ಈ ಬೆನ್ನಲ್ಲೇ ಮಾತನಾಡಿರುವ ಉಕ್ರೇನ್ ಅಧ್ಯಕ್ಷ ಝೆಲನ್ಸ್ಕಿ, "ಉಕ್ರೇನ್ ಈ ಯುದ್ಧ ಆರಂಭವಾದಾಗಿನಿಂದಲೂ ಪ್ರತಿಕ್ಷಣ ಶಾಂತಿಗಾಗಿ ಶ್ರಮಿಸುತ್ತಿದೆ. ನಾವು ಸುರಕ್ಷತೆಯನ್ನು ಬಯಸುತ್ತಿದ್ದೇವೆ" ಎಂದಿದ್ದಾರೆ.


# ಅತ್ಯಾಚಾರ ಸಂತ್ರಸ್ತೆಯ ಗರ್ಭಪಾತಕ್ಕೆ ರಾಜಸ್ಥಾನ ಹೈಕೋರ್ಟ್ ಸಮ್ಮತಿ

ಜೈಪುರ: ಅತ್ಯಾಚಾರಕ್ಕೊಳಗಾಗಿ ಗರ್ಭ ಧರಿಸಿರುವ 13 ವರ್ಷದ ಬಾಲಕಿಯ 26 ವಾರಗಳ ಭ್ರೂಣ ತೆಗೆಸಲು ರಾಜಸ್ಥಾನ ಹೈಕೋರ್ಟ್ ಅನುಮತಿ ನೀಡಿದೆ. ಈ ಗರ್ಭವು ಆಕೆಯನ್ನು ಜೀವನಪೂರ್ತಿ ಸಂಕಷ್ಟಕ್ಕೆ ತಳ್ಳುತ್ತದೆ. ಜೊತೆಗೆ, ಮಗುವಿನ ನಿರ್ವಹಣೆ ಹೊರೆ ಸೇರಿ ಮತ್ತಿತರ ಅಂಶಗಳು ಆಕೆಗೆ ಸವಾಲಾಗುತ್ತದೆ. ಹೀಗಾಗಿ, ವೈದ್ಯಕೀಯ ಗರ್ಭಪಾತಕ್ಕೆ ಅನುಮತಿ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

ನ್ಯಾಸುದೇಶ್ ಬನ್ಸಲ್ ಅವರಿದ್ದ ಪೀಠ ಈ ಆದೇಶ ನೀಡಿತು. ಬಾಲಕಿ ಗರ್ಭವನ್ನು ಮುಂದುವರೆಸಿದಲ್ಲಿ ಅದು ಆಕೆಯ ಮಾನಸಿಕ ಆರೋಗ್ಯದ ಮೇಲೆ ಹೆಚ್ಚು ಹಾನಿ ಮಾಡುವ ಸಾಧ್ಯತೆ ಇದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅತ್ಯಾಚಾರ ಸಂತ್ರಸ್ತೆಯ ಪರ ವಾದ ಮಂಡಿಸಿದ ಸೋನಿಯಾ ಶಾಂಡಿಲ್ಯಾ ಮಾತನಾಡಿ, "ಜೈಪುರದಲ್ಲಿನ ಸಂಗನೆರ್‌ನ ಮಹಿಳಾ ಆಸ್ಪತ್ರೆಯ ಸೂಪರಿಂಟೆಂಡೆಂಟ್‌ಗೆ ವೈದ್ಯಕೀಯ ಮಂಡಳಿ ಮೇಲ್ವಿಚಾರಣೆ ಮೇಲೆ ಗರ್ಭಪಾತ ನಡೆಸುವಂತೆ ಸೂಚಿಸಲಾಗಿದೆ" ಎಂದು ತಿಳಿಸಿದ್ದಾರೆ.

ಗರ್ಭಪಾತದ ವೇಳೆ ಭ್ರೂಣ ಜೀವಂತವಾಗಿದ್ದು, ಅದರ ಉಳಿವಿಗೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಬೇಕು. ಅದರ ಭವಿಷ್ಯವನ್ನು ರಾಜ್ಯ ಸರ್ಕಾರದ ನಿಧಿ ಮೂಲಕ ಆರೈಕೆ ಮಾಡಬೇಕು.




ಒಂದು ವೇಳೆ ಭ್ರೂಣ ಬದುಕಲಿಲ್ಲವಾದರೆ ಅದರ ಅಂಗಾಂಶವನ್ನು ಡಿಎನ್‌ಎ ವಿಶ್ಲೇಷಣೆಗೆ ಸಂರಕ್ಷಿಸಬೇಕು ಎಂದು ಪೀಠ ಹೇಳಿದೆ.

ವಿಚಾರಣೆ ವೇಳೆ, 28 ವಾರಗಳ ನಂತರ ಗರ್ಭಪಾತಕ್ಕೆ ಕೂಡ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ ಎಂಬುದನ್ನು ವಕೀಲರ ತಂಡ ಉಲ್ಲೇಖಿಸಿತು.

ವೈದ್ಯಕೀಯ ಗರ್ಭಪಾತ ಕಾಯ್ದೆ–1971ರ ಪ್ರಕಾರ, ಅತ್ಯಾಚಾರ ಸಂತ್ರಸ್ತೆ ಗರ್ಭ ಧರಿಸಿದ್ದಲ್ಲಿ, ಅದು ಸಂತ್ರಸ್ತೆಯ ಮಾನಸಿಕ ಆರೋಗ್ಯದ ಮೇಲೆ ಗಂಭೀರ ಅಪಾಯ ಉಂಟುಮಾಡುತ್ತದೆ ಎಂಬುದನ್ನು ಕಾನೂನಾತ್ಮಕವಾಗಿ ಪರಿಗಣಿಸಲಾಗಿದೆ.

24 ವರ್ಷಗಳ ಒಳಗಿನ ಗರ್ಭಪಾತಕ್ಕೆ ಕಾನೂನಿನ ಯಾವುದೇ ಅನುಮತಿ ಬೇಕಿಲ್ಲ.ಆದರೆ, ಅದಕ್ಕಿಂತ ಹೆಚ್ಚಿನ ವಾರಗಳು ಆದಾಗ ಎಂಟಿಪಿಎಲ್ ಕಾಯ್ದೆ–1971 ಪ್ರಕಾರ, ಕಾನೂನಾತ್ಮಕ ಒಪ್ಪಿಗೆ ಅಗತ್ಯ.

# ರೈಲು ಹೈಜಾಕ್: 104 ಪ್ರಯಾಣಿಕರ ರಕ್ಷಣೆ


ಕ್ವೆಟ್ಟಾ: ಪಾಕಿಸ್ತಾನದ ಸಂಘರ್ಷಪೀಡಿತ ಪ್ರಾಂತ್ಯ ಬಲೂಚಿಸ್ತಾನದ ಸುರಂಗ ಮಾರ್ಗದಲ್ಲಿ ಮಂಗಳವಾರ ಮಧ್ಯಾಹ್ನ ಬಲೂಚಿ ಬಂಡುಕೋರರು ಪ್ರಯಾಣಿಕ ರೈಲನ್ನು ಹೈಜಾಕ್ ಮಾಡಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಭದ್ರತಾ ಪಡೆಗಳು, 16 ಉಗ್ರರನ್ನು ಹತ್ಯೆಗೈದು, 104 ಪ್ರಯಾಣಿಕರನ್ನು ರಕ್ಷಿಸಿವೆ ಎಂದು ಭದ್ರತಾ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನಿನ್ನೆ ಮಧ್ಯಾಹ್ನ 9 ಬೋಗಿಗಳಿದ್ದ ಜಾಫರ್ ಎಕ್ಸ್‌ಪ್ರೆಸ್ 400 ಪ್ರಯಾಣಿಕರನ್ನು ಹೊತ್ತು ಕ್ವೆಟ್ಟಾದಿಂದ ಪೇಶಾವರಕ್ಕೆ ತೆರಳುತ್ತಿತ್ತು. ಈ ಸಂದರ್ಭದಲ್ಲಿ ಶಸ್ತ್ರಸಜ್ಜಿತ ಉಗ್ರರು ಪರ್ವತ ಪ್ರದೇಶವಾಗಿರುವ ಗುಡಲರ್ ಮತ್ತು ಪಿರು ಕುನ್ರಿ ಎಂಬಲ್ಲಿನ ಸುರಂಗ ಮಾರ್ಗದಲ್ಲಿ ರೈಲಿಗೆ ತಡೆಯೊಡ್ಡಿ ದಾಳಿ ನಡೆಸಿದ್ದಾರೆ. ಬಲೂಚಿಸ್ತಾನ ಲಿಬರೇಶನ್ ಆರ್ಮಿ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಭದ್ರತಾ ಪಡೆಗಳು ನೀಡಿದ ಮಾಹಿತಿಯಂತೆ, ಸದ್ಯ ಉಗ್ರರ ಜೊತೆ ಗುಂಡಿನ ಚಕಮಕಿ ನಡೆಯುತ್ತಿದೆ. 104 ಪ್ರಯಾಣಿಕರನ್ನು ರಕ್ಷಿಸಲಾಗಿದೆ. ಈ ಪೈಕಿ ಮಹಿಳೆಯರು ಮತ್ತು ಮಕ್ಕಳಿದ್ದಾರೆ. ಸುಮಾರು 16 ಉಗ್ರರನ್ನು ಹತ್ಯೆ ಮಾಡಲಾಗಿದೆ. ಹಲವರು ಗಾಯಗೊಂಡಿದ್ದಾರೆ.

ಉಗ್ರರು ಕೆಲವು ಪ್ರಯಾಣಿಕರನ್ನು ಪರ್ವತ ಪ್ರದೇಶಕ್ಕೆ ಕೊಂಡೊಯ್ದಿರುವ ಕುರಿತು ಮಾಹಿತಿ ಇದೆ. ಭದ್ರತಾ ಪಡೆಗಳು ಕಳೆದ ರಾತ್ರಿಯೂ ಕಾರ್ಯಾಚರಣೆ ನಡೆಸಿವೆ. ಇದಕ್ಕೂ ಮುನ್ನ ರಕ್ಷಿಸಲಾಗದ 58 ಪ್ರಯಾಣಿಕರ ಪೈಕಿ 31 ಮಂದಿ ಮಹಿಳೆಯರು ಮತ್ತು 15 ಮಂದಿ ಮಕ್ಕಳಿದ್ದಾರೆ. ಇವರನ್ನು ಮತ್ತೊಂದು ರೈಲಿನ ಮೂಲಕ ಬಲೂಚಿಸ್ತಾನದ ಮಚ್ ಎಂಬ ಪಟ್ಟಣಕ್ಕೆ ರವಾನಿಸಲಾಗಿತ್ತು.

ಉಗ್ರರು ಕತ್ತಲಲ್ಲಿ ಪರಾರಿಯಾಗಲು ಸಣ್ಣ ಸಣ್ಣ ಗುಂಪುಗಳಾಗಿ ರಚಿಸಿಕೊಂಡಿದ್ದಾರೆ. ಆದರೆ ಸುರಂಗ ಮಾರ್ಗವನ್ನು ಭದ್ರತಾ ಪಡೆಗಳು ಸುತ್ತುವರೆದಿವೆ?. ಉಳಿದ ಪ್ರಯಾಣಿಕರನ್ನೂ ಸದ್ಯದಲ್ಲೇ ರಕ್ಷಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಇದಕ್ಕೂ ಮುನ್ನ ಭದ್ರತಾ ಪಡೆಗಳು 80 ಮಂದಿ ಪ್ರಯಾಣಿಕರನ್ನು




ರಕ್ಷಿಸುವಲ್ಲಿ ಯಶಸ್ವಿಯಾಗಿದ್ದವು. ಇದರಲ್ಲಿ 43 ಮಂದಿ ಪುರುಷರು, 26 ಮಹಿಳೆಯರು ಮತ್ತು 11 ಮಂದಿ ಮಕ್ಕಳಿದ್ದರು ಎಂದು ಬಲೂಚಿಸ್ತಾನ ಸರ್ಕಾರದ ವಕ್ತಾರ ಶಹೀದ್ ರಿಂದ್ ಹೇಳಿದ್ದಾರೆ.

ಸಂಬಂಧಪಟ್ಟ ಅಧಿಕಾರಗಳು ಈ ಕುರಿತು ಹೆಚ್ಚಿನ ಮಾಹಿತಿ ನೀಡದಿದ್ದರೂ, ರಿಂದ್ ಅವರ ಪ್ರಕಾರ, ಸುರಂಗ ಮಾರ್ಗದಲ್ಲಿ ರೈಲನ್ನು ತಡೆದಿರುವ ಕುರಿತು ರೈಲು ಸಿಬ್ಬಂದಿ ಮಾಹಿತಿ ನೀಡಿದ ತಕ್ಷಣವೇ ಭದ್ರತಾ ಪಡೆಗಳು ಹಾಗು ಸೇನಾ ಪಡೆಗಳು ಸುರಂಗ ಮಾರ್ಗವಿರುವ ಪರ್ವತ ಪ್ರದೇಶಗಳನ್ನು ತಲುಪಿದ್ದವು.

ಪಾಕಿಸ್ತಾನ ಮಾಧ್ಯಮಗಳ ವರದಿ ಪ್ರಕಾರ, ಉಗ್ರರು ನಿನ್ನೆ ರೈಲು ಹೈಜಾಕ್ ಮಾಡಿದ ಸುರಂಗ ಮಾರ್ಗದ ಸಮೀಪ ಭಾರೀ ಪ್ರಮಾಣದಲ್ಲಿ ಸ್ಫೋಟ ಮತ್ತು ಗುಂಡಿನ ದಾಳಿ ನಡೆದಿದೆ.

ಸಂಕಷ್ಟದಲ್ಲಿ ಸಿಲುಕಿರುವ ಪ್ರಯಾಣಿಕರ ಸಂಬಂಧಿಕರು ತಮ್ಮವರ ಬಗ್ಗೆ ಮಾಹಿತಿ ಪಡೆಯಲು ದುಂಬಾಲು ಬೀಳುತ್ತಿದ್ದು, ಪೇಶಾವರ್ ಮತ್ತು ಕ್ವೆಟ್ಟಾ ರೈಲು ಸ್ಟೇಷನ್‌ನಲ್ಲಿ ಪಾಕಿಸ್ತಾನ ರೈಲ್ವೆ ಈಗಾಗಲೇ ತುರ್ತು ಸಹಾಯವಾಣಿ ಡೆಸ್ಕ್‌ಗಳನ್ನು ಸ್ಥಾಪಿಸಿದೆ.

ಜನರು ಸಾಮಾಜಿಕ ಜಾಲತಾಣಗಳಲ್ಲಿ ಬರುವ ಊಹಾಪೋಹಗಳಿಗೆ ಕಿವಿಗೊಡಬಾರದು ಎಂದು ಪೇಶಾವರ ರೈಲ್ವೇ ಸ್ಟೇಷನ್‌ನ ಹಿರಿಯ ಅಧಿಕಾರಿ ತಾರಿಕ್ ಮೊಹಮ್ಮದ್ ಮನವಿ ಮಾಡಿದ್ದಾರೆ.

ಒಂದೂವರೆ ತಿಂಗಳ ಸ್ಥಗಿತದ ನಂತರ ಪಾಕಿಸ್ತಾನ ರೈಲ್ವೆ ಪೇಶಾವರ ಮತ್ತು ಕ್ವೆಟ್ಟಾ ನಡುವೆ ರೈಲು ಸಂಚಾರ ಪ್ರಾರಂಭಿಸಿತ್ತು. ಕಳೆದ ವರ್ಷದ ನವೆಂಬರ್‌ನಲ್ಲಿ ಕ್ವೆಟ್ಟಾ ರೈಲ್ವೇ ಸ್ಟೇಷನ್‌ನಲ್ಲಿ ನಡೆದ ಆತ್ಮಹತ್ಯಾ ಬಾಂಬ್ ಸ್ಫೋಟದಲ್ಲಿ 26 ಜನರು ಸಾವನ್ನಪ್ಪಿದ್ದು 62ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಇದಾದ ಬಳಿಕ ಪಾಕಿಸ್ತಾನ ರೈಲ್ವೇ ಹಲವು ರೈಲು ಸಂಚಾರಗಳನ್ನು ಸ್ಥಗಿತಗೊಳಿಸಿತ್ತು.

# ಉಜ್ಬೇಕಿಸ್ತಾನದ ಮಹಿಳೆಯ ಶವ ಪತ್ತೆ

**ಲಕ್ನೋ:** ಉತ್ತರ ಪ್ರದೇಶದ ಲಕ್ನೋದ ವಿಭೂತಿ ಖಾಂಡ್ ಪ್ರದೇಶದ ಹೋಟೆಲ್ ಕೊಠಡಿಯಲ್ಲಿ ವಿದೇಶಿ ಮಹಿಳೆಯ ಮೃತದೇಹ ಪತ್ತೆಯಾಗಿದೆ. ಮಹಿಳೆ ಸಾವಿಗೂ ಮುನ್ನ ಹೋಟೆಲ್‌ನಲ್ಲಿ ದೆಹಲಿಯ ವ್ಯಕ್ತಿಯೊಂದಿಗೆ ಇದ್ದ ಕಾರಣ ಪೊಲೀಸರು ಈ ಬಗ್ಗೆ ತನಿಖೆ ಆರಂಭಿಸಿದ್ದಾರೆ. ಆ ವ್ಯಕ್ತಿಯನ್ನು ಬಂಧಿಸಲು ಪೊಲೀಸರು ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ.

ಹೋಟೆಲ್ ಸಿಬ್ಬಂದಿಯಿಂದ ಮಾಹಿತಿ ಪಡೆದ ನಂತರ ಪೊಲೀಸರು ಸ್ಥಳಕ್ಕೆ ಧಾವಿಸಿದರು. ನಂತರ ಪೊಲೀಸರು ಶವವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು. ವಿಧಿವಿಜ್ಞಾನ ತಂಡವೂ ಸ್ಥಳಕ್ಕೆ ಆಗಮಿಸಿ ಘಟನೆಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ಸಂಗ್ರಹಿಸಿತು.

ಉಜ್ಬೇಕಿಸ್ತಾನ್ ಪ್ರಜೆ ಎಂದು ಗುರುತಿಸಲ್ಪಟ್ಟ ಮೃತ ಮಹಿಳೆ ಒಂದು ವಾರದ ಹಿಂದೆ ದಕ್ಷಿಣ ದೆಹಲಿಯ ಯುವಕನೊಂದಿಗೆ ಈ ಹೋಟೆಲ್ ನಲ್ಲಿ ರೂಂ ಮಾಡಿದ್ದರು ಎಂದು ವರದಿಯಾಗಿದೆ. ಈ ಇಬ್ಬರು ಮಾರ್ಚ್ 2ರಂದು ಅತಿಥಿ ಇನ್ ಹೋಟೆಲ್‌ಗೆ ಭೇಟಿ ನೀಡಿದ್ದರು. ಸತ್ನಮ್ ಸಿಂಗ್ ಎಂದು ಗುರುತಿಸಲ್ಪಟ್ಟ ವ್ಯಕ್ತಿ ಮಾರ್ಚ್ 6ರಂದು ಹೋಟೆಲ್‌ನಿಂದ ಹೊರಟುಹೋಗಿದ್ದ. ಅಂದಿನಿಂದ ಆ ಮಹಿಳೆ ತನ್ನ ರೂಂನಲ್ಲಿ ಒಬ್ಬಂಟಿಯಾಗಿ ವಾಸಿಸುತ್ತಿದ್ದಳು ಎನ್ನಲಾಗಿದೆ.

ಸೋಮವಾರ ಆ ಮಹಿಳೆಯ ಕೋಣೆಗೆ ನೀರು ಮತ್ತು ಊಟವನ್ನು ತಲುಪಿಸಿದ್ದೇವೆ ಎಂದು ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು. ಆದರೆ, ಇಂದು ಕ್ಲೀನಿಂಗ್ ಸಿಬ್ಬಂದಿ ರೂಂನ ಡೋರ್‌ಬೆಲ್ ಬಾರಿಸಿದಾಗ ಯಾವುದೇ ಪ್ರತಿಕ್ರಿಯೆ ಇರಲಿಲ್ಲ.

ಹಲವಾರು ಬಾರಿ ಬೆಲ್ ಬಾರಿಸಿದ ನಂತರ ಸಿಬ್ಬಂದಿ ಚಿಂತಿತರಾದರು. ಆ ರೂಂನ ಒಳಗೆ ಹೋಗಲು ಮಾಸ್ಟರ್ ಕೀಯನ್ನು ಬಳಸಿದರು. ಒಳಗೆ ಹೋದಾಗ ಆ ಮಹಿಳೆಯ ಮೃತ ದೇಹವು ನೆಲದ ಮೇಲೆ ಬಿದ್ದಿರುವುದನ್ನು ನೋಡಿ ಪೊಲೀಸರಿಗೆ ವಿಷಯ ತಿಳಿಸಿದರು. ಪೊಲೀಸರು ಸತ್ನಮ್ ಸಿಂಗ್ ಅವರನ್ನು ಹುಡುಕುತ್ತಿದ್ದಾರೆ

# ಕದನ ವಿರಾಮ ಒಪ್ಪುವುದು ಬಿಡುವುದು ರಷ್ಯಾಗೆ ಬಿಟ್ಟ ವಿಚಾರ: ಅಧ್ಯಕ್ಷ ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್: ಉಕ್ರೇನ್ ಜೊತೆಗಿನ 30 ದಿನಗಳ ಕದನ ವಿರಾಮಕ್ಕೆ ರಷ್ಯಾ ಒಪ್ಪುವ ಭರವಸೆ ಇದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ. ಕದನ ವಿರಾಮವು ಸಕಾರಾತ್ಮಕ ಬೆಳವಣಿಗೆಯಾಗಲಿದೆಯಾದರೂ, ಇದಕ್ಕಾಗಿ ರಷ್ಯಾವನ್ನು ಒಪ್ಪಿಸುವುದು ಅಮೆರಿಕದ ಜವಾಬ್ದಾರಿ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್ ಸ್ಕಿ ಇದಕ್ಕೂ ಮುನ್ನ ಹೇಳಿದ್ದರು.

ಯುಎಸ್ ಮತ್ತು ಉಕ್ರೇನ್ ಹಿರಿಯ ಅಧಿಕಾರಿಗಳು ಮಂಗಳವಾರ ಸೌದಿ ಅರೇಬಿಯಾದ ಜೆಡ್ಡಾದಲ್ಲಿ ಮಾಸ್ಕೋ ಮತ್ತು ಕೈವ್ ನಡುವಿನ ಮೂರು ವರ್ಷಗಳ ಯುದ್ಧವನ್ನು ಕೊನೆಗೊಳಿಸಲುಮಾತುಕತೆ ನಡೆಸಿದರು. ಮಾತುಕತೆಯಲ್ಲಿ 30 ದಿನಗಳ ಕದನ ವಿರಾಮದ ಪ್ರಸ್ತಾವನೆಯನ್ನು ಇಡಲಾಗಿದೆ ಎಂದು ತಿಳಿದು ಬಂದಿದೆ.

"ಈಗ ಸ್ವಲ್ಪ ಸಮಯದ ಹಿಂದೆ, ಉಕ್ರೇನ್ ಕದನ ವಿರಾಮಕ್ಕೆ ಒಪ್ಪಿಕೊಂಡಿದೆ. ಈಗ ನಾವು ರಷ್ಯಾ ಬಳಿಗೆ ಈ ವಿಷಯ ಕೊಂಡೊಯ್ಯಲಿದ್ದೇವೆ ಮತ್ತು ಅಧ್ಯಕ್ಷ ಪುಟಿನ್ ಕೂಡ ಇದಕ್ಕೆ ಒಪ್ಪುತ್ತಾರೆ ಎಂದು ಆಶಿಸುತ್ತೇವೆ" ಎಂದು ಟ್ರಂಪ್ ಜೆಡ್ಡಾ ಪ್ರಕಟಣೆಯ ನಂತರ ಇಲ್ಲಿ ಹೇಳಿದರು. "ಕದನ ವಿರಾಮಕ್ಕಾಗಿ ನಾವು ರಷ್ಯಾದ ಮನವೊಪ್ಪಿಸುವಲ್ಲಿ ಯಶಸ್ವಿಯಾದರೆ ಅದು ಒಳ್ಳೆಯ ಬೆಳವಣಿಗೆಯಾಗಲಿದೆ. ಒಂದೊಮ್ಮೆ ಅದು ಸಾಧ್ಯವಾಗದಿದ್ದರೆ ಯುದ್ಧ ಮುಂದುವರಿಯಲಿದೆ ಮತ್ತು ನಿರಂತರವಾಗಿ ಜನ ಸಾಯಲಿದ್ದಾರೆ" ಎಂದು ಅವರು ತಮ್ಮ ಟ್ರೂತ್ ಸೋಷಿಯಲ್ ಖಾತೆಯಲ್ಲಿ ಪೋಸ್ಟ್ ಮಾಡಿದ ಮತ್ತೊಂದು ವೀಡಿಯೊದಲ್ಲಿ ಹೇಳಿದ್ದಾರೆ.

ಅಮೆರಿಕದ ಕಡೆಯ ಸಂಧಾನಕಾರರು ನಮ್ಮ ದೇಶದ ವಾದಗಳನ್ನು ಅರ್ಥಮಾಡಿಕೊಂಡಿದ್ದಾರೆ ಮತ್ತು ನಮ್ಮ ಪ್ರಸ್ತಾಪಗಳನ್ನು ಪರಿಗಣಿಸಿದ್ದಾರೆ ಎಂದು ಹೇಳಿದ ಜೆಲೆನ್‌ಸ್ಕಿ, ನಮ್ಮ ಮಧ್ಯದ ರಚನಾತ್ಮಕ ಮಾತುಕತೆಗಾಗಿ ಅಧ್ಯಕ್ಷ ಟ್ರಂಪ್‌ಗೆ ಕೃತಜ್ಞನಾಗಿದ್ದೇನೆ ಎಂದರು.


"ಉಕ್ರೇನ್ ಈ ಪ್ರಸ್ತಾಪವನ್ನು ಸ್ವೀಕರಿಸಲು ಸಿದ್ಧವಾಗಿದೆ. ನಾವು ಇದನ್ನು ಸಕಾರಾತ್ಮಕ ಹೆಜ್ಜೆಯಾಗಿ ನೋಡುತ್ತೇವೆ ಮತ್ತು ಅದನ್ನು ಒಪ್ಪಲು ಸಿದ್ಧರಿದ್ದೇವೆ. ಈಗ, ಅದಕ್ಕಾಗಿ ರಷ್ಯಾದ ಮನವೊಲಿಸುವುದು ಯುನೈಟೆಡ್ ಸ್ಟೇಟ್ಸ್?ಗೆ ಬಿಟ್ಟದ್ದು. ರಷ್ಯಾ ಒಪ್ಪಿದರೆ, ಕದನ ವಿರಾಮ ತಕ್ಷಣವೇ ಜಾರಿಗೆ ಬರಲಿದೆ" ಎಂದು ಜೆಡ್ಡಾದಿಂದ ಪ್ರಕಟಣೆ ಬಂದ ಕೆಲವೇ ಗಂಟೆಗಳ ನಂತರ ಜೆಲೆನ್ ಸ್ಕಿ ಹೇಳಿದರು.

"ಇಂದಿನ ಮಾತುಕತೆಯ ಸಮಯದಲ್ಲಿ ಯುಎಸ್ ಕಡೆಯವರು ಬಹುದೊಡ್ಡ ಪ್ರಸ್ತಾವನೆಯೊಂದನ್ನು ಇಟ್ಟಿದ್ದಾರೆ. 30 ದಿನಗಳ ಸಂಪೂರ್ಣ ಮಧ್ಯಂತರ ಕದನ ವಿರಾಮದಲ್ಲಿ ಕ್ಷಿಪಣಿ, ಡ್ರೋನ್ ಮತ್ತು ಕಪ್ಪು ಸಮುದ್ರದಲ್ಲಿನ ಬಾಂಬ್ ದಾಳಿಗಳು ಮಾತ್ರವಲ್ಲದೆ ಇಡೀ ಮುಂಚೂಣಿಯಲ್ಲಿ ದಾಳಿಗಳನ್ನು ನಿಲ್ಲಿಸುವ ಪ್ರಸ್ತಾವನೆ ಇದರಲ್ಲಿದೆ" ಎಂದು ಉಕ್ರೇನ್ ಅಧ್ಯಕ್ಷರು ವೀಡಿಯೊದಲ್ಲಿ ತಿಳಿಸಿದ್ದಾರೆ.

# ಉಸ್ಮಾನಿಯಾ ವಿವಿಯಿಂದ ಮೈಕ್ರೋಚಿಪ್ ಬಿಡುಗಡೆ

**ಹೈದರಾಬಾದ್:** ಉಸ್ಮಾನಿಯಾ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜು ಮುಂದಿನ ಆರು ತಿಂಗಳೊಳಗೆ ದೇಶೀಯವಾಗಿ ಅಭಿವೃದ್ಧಿಪಡಿಸಲಾದ 'ಫ್ರೀಕ್ವೆನ್ಸಿ ಸಿಂಥಸೈಜರ್' ಎಂಬ ಹೆಸರಿನ ಮೈಕ್ರೋಚಿಪ್ ಬಿಡುಗಡೆ ಮಾಡಲು ಸಜ್ಜಾಗಿದೆ.

ಈ ಮೈಕ್ರೋಚಿಪ್ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಪ್ರೊ. ಚಂದ್ರಶೇಖರ್ ಅವರು ಸಂಶೋಧನಾ ವಿದ್ಯಾರ್ಥಿಗಳೊಂದಿಗೆ ಸೇರಿ ಅಭಿವೃದ್ಧಿಪಡಿಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರ 'ಚಿಪ್ಸ್ ಟು ಸ್ಟಾರ್ಟಪ್ ' ಯೋಜನೆಯಡಿ ಐದು ಕೋಟಿ ರೂ. ಅನುದಾನ ನೀಡಿದೆ. ಫ್ರೀಕ್ವೆನ್ಸಿ ಸಿಂಥಸೈಸರ್ ಮೈಕ್ರೋಚಿಪ್ ವಾಹನಗಳು, ಡಿಜಿಟಲ್ ಉಪಕರಣಗಳು ಮತ್ತು ಇತರ ಎಲೆಕ್ಟ್ರಾನಿಕ್ ಸಾಧನಗಳ ಆಂತರಿಕ ದಕ್ಷತೆ ಹೆಚ್ಚಿಸಲಿದೆ.




ಹೈದರಾಬಾದ್‌ನ ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ಸಂಶೋಧನಾ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾದ ಈ ಯೋಜನೆಯು ಸೆಮಿಕಂಡಕ್ಟರ್ ತಂತ್ರಜ್ಞಾನದಲ್ಲಿ ಭಾರತ ಸ್ವಾವಲಂಬನೆಯಾಗಲು ಪ್ರಮುಖ ಹೆಜ್ಜೆಯಾಗಿದೆ. ಈ ಚಿಪ್ ಬ್ಲೂಟೂತ್ ತಂತ್ರಜ್ಞಾನದೊಂದಿಗೆ ಕಾರ್ಯನಿರ್ವಹಿಸುತ್ತದೆ ಮತ್ತು ಇದು ಮಾರುಕಟ್ಟೆಗೆ ಬಂದ ನಂತರ ವಿವಿಧ ಕೈಗಾರಿಕೆಗಳಲ್ಲಿ ಕ್ರಾಂತಿಯನ್ನುಂಟು ಮಾಡಲಿದೆ.

ವಿಜ್ಞಾನಿಗಳು ಇತ್ತೀಚೆಗೆ ಚಂಡೀಗಢದ ಸೆಮಿಕಂಡಕ್ಟರ್ ಲ್ಯಾಬೋರೇಟರಿಯಲ್ಲಿ ಚಿಪ್‌ನ ದಕ್ಷತೆ ಮೌಲ್ಯಮಾಪನ ಮಾಡಲು ಪರೀಕ್ಷೆಗಳನ್ನು ನಡೆಸಿದರು. ಮೈಕ್ರೋಚಿಪ್‌ನೊಳಗಿನ ಸರ್ಕ್ಯೂಟ್ ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಪರೀಕ್ಷೆಗಳು ದೃಢಪಡಿಸಿವೆ. ಮುಂದಿನ ಹಂತವು ಉತ್ಪಾದನೆ ಮತ್ತು ಅಧಿಕೃತ ಅನುಮೋದನೆಗೂ ಮೊದಲು ಸಮಯ ವಿಶ್ಲೇಷಣೆ ಮತ್ತು ಧ್ವನಿ ಸಂಕೇತ ಪರೀಕ್ಷೆಗಳನ್ನು ಒಳಗೊಂಡಿರುತ್ತದೆ.

ಗೇಮ್ ಚೇಂಜರ್ ಆಗಲಿರುವ ಫ್ರೀಕ್ವೆನ್ಸಿ ಸಿಂಥಸೈಸರ್: ಉಸ್ಮಾನಿಯಾ ವಿಶ್ವವಿದ್ಯಾಲಯ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಚಂದ್ರಶೇಖರ್ ಮಾತನಾಡಿ, "ವಾಹನಗಳು, ಉಪಕರಣಗಳು ಮತ್ತು ಇತರ ಡಿಜಿಟಲ್ ಸಾಧನಗಳ ಆಂತರಿಕ ದಕ್ಷತೆ ಹೆಚ್ಚಿಸಲು ವಿನ್ಯಾಸಗೊಳಿಸಲಾದ ಮೈಕ್ರೋಚಿಪ್ ಬಹುತೇಕ ಪೂರ್ಣಗೊಂಡಿದೆ. ಫ್ರೀಕ್ವೆನ್ಸಿ ಸಿಂಥಸೈಸರ್ ಚಿಪ್‌ಗಳು ಆಟೋಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಗೇಮ್ ಚೇಂಜರ್ ಆಗಲಿವೆ. ಕೇಂದ್ರ ಸರ್ಕಾರದ ಅನುಮೋದನೆಯ ನಂತರ ಮಾರುಕಟ್ಟೆ ಪ್ರವೇಶಿಸಿದ ಬಳಿಕ, ಇದು ಜಾಗತಿಕ ಮಟ್ಟದಲ್ಲಿ ಭಾರತದ ಸೆಮಿಕಂಡಕ್ಟರ್ ಸಾಮರ್ಥ್ಯ ಪ್ರದರ್ಶಿಸುತ್ತದೆ" ಎಂದರು.

ಒಳಚರಂಡಿ ಮೇಲ್ವಿಚಾರಣಾ ಸಾಧನ ಅಭಿವೃದ್ಧಿ: ಕಳೆದ ತಿಂಗಳು, ಉಸ್ಮಾನಿಯಾ ಯೂನಿವರ್ಸಿಟಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕಡಿಮೆ ವೆಚ್ಚದ ಒಳಚರಂಡಿ ಮೇಲ್ವಿಚಾರಣಾ ವ್ಯವಸ್ಥೆ ಅಭಿವೃದ್ಧಿಪಡಿಸಿತ್ತು. ಇದು ಒಳಚರಂಡಿ ವ್ಯವಸ್ಥೆಗಳಲ್ಲಿ ಹಾನಿಕಾರಕ ಅನಿಲಗಳನ್ನು ಪತ್ತೆಹಚ್ಚಲು ಮತ್ತು ನೈರ್ಮಲ್ಯ ಕಾರ್ಮಿಕರನ್ನು ರಕ್ಷಿಸಲು ವಿನ್ಯಾಸಗೊಳಿಸಲಾಗಿದೆ.







# ಆ ರಾತ್ರಿ ಅವರು ಹೋಗಿದ್ರೆ ಕಲ್ಪನಾ ಸಾಯುತ್ತಿರಲಿಲ್ಲ..



ಚಂದನವನದ ಮಿನುಗುತಾರೆ ಕಲ್ಪನಾ ಸಾಯುವ ಹಿಂದಿನ ದಿನ ನಡೆದ ಘಟನೆಯನ್ನು ರಂಗಭೂಮಿ ಕಲಾವಿದೆ, ಹಿರಿಯ ನಟಿ ಜಯಲಕ್ಷ್ಮೀ ಪಾಟೀಲ್ ಹೇಳಿದ್ದಾರೆ. ಯುಟ್ಯೂಬ್ ಚಾನೆಲ್‌ಗೆ ಸಂದರ್ಶನ ನೀಡಿರುವ ಜಯಲಕ್ಷ್ಮೀ ಪಾಟೀಲ್, ರಂಗಭೂಮಿಯ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ.

ಇದೇ ಸಂದರ್ಶನದಲ್ಲಿ ಕಲ್ಪನಾ ಸಾಯುವ ಹಿಂದಿನ ನಡೆದ ಘಟನೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ನಾಟಕ ಕಂಪನಿ ಮಾಲೀಕ ಬಸವರಾಜ್ ಗುಡಿಗೇರಿ ಮತ್ತು ಕಲ್ಪನಾ ನಡುವೆ ಏನಾಯ್ತು ಎಂಬ ಸತ್ಯವನ್ನು ಹೇಳಿದ್ದಾರೆ. ಒಮ್ಮೆ ಬಸವರಾಜ್ ಅವರ ಬೈಕ್ ಮೇಲೆ ಕಲ್ಪನಾ ಬರೋದನ್ನು ನೋಡಿ ನಮಗೆ ಒಂದು ರೀತಿ ಖುಷಿಯಾಯ್ತು. ಅಂದು ನಮ್ಮ ಜೊತೆ ಸ್ವಲ್ಪ ಸಮಯ ಮಾತನಾಡಿದರು. ನಂತರ ಮತ್ತೊಂದು ದಿನ ನಮ್ಮೆಲ್ಲರನ್ನು ಕರೆಸಿಕೊಂಡು ಹೊಟ್ಟೆ ತುಂಬಾ ಮಾತನಾಡಿದ್ದರು ಎಂದು ಹೇಳಿದ್ದರು.

ಕಲ್ಪನಾ ಸಾಯುವ ಹಿಂದಿನ ದಿನ ನಾಟಕದಲ್ಲಿ ಭಾಗಿಯಾಗಿದ್ದರು. ಅಂದಿನ ನಾಟಕದಲ್ಲಿ ಕಲ್ಪನಾ ಮತ್ತು ಬಸವರಾಜ್ ಗುಡಿಗೇರಿ ತಾಯಿ–ಮಗನ ಪಾತ್ರದಲ್ಲಿ ನಟಿಸಿದ್ದರು. ಹಾಲು ಕುಡಿ ರಾಮ ಅಂತ ಹೇಳುವ ಬದಲು ಹುಲ್ಲು ಕುಡಿ ರಾಮ ಎಂದು ಕಲ್ಪನಾ ಹೇಳಿದರು. ಮುಂದೆಯೇ ಕುಳಿತಿದ್ದ ಜನಕ್ಕೆ ಕಲ್ಪನಾಜೀ ಡೈಲಾಗ್ ತಪ್ಪು ಹೇಳಿದರು ಅನ್ನೋದು ಗೊತ್ತಾಯ್ತು. ಹಿಂದೆ ಇದ್ದವರಿಗೆ ಗೊತ್ತಾಗಿರಲಿಲ್ಲ. ಬಸವರಾಜ್ ಸುಮ್ಮನೇ ಇದ್ದಿದ್ರೆ ಏನು ಆಗುತ್ತಿರಲಿಲ್ಲ. ಆದ್ರೆ ಅವರು, ಏನಂದೆ... ನಾನು ಹುಲ್ಲು ಕುಡಿಬೇಕಾ ಎಂದು ಮರು ಪ್ರಶ್ನೆ ಮಾಡಿದರು. ಆಗ ಎಲ್ಲಾ ವೀಕ್ಷಕರಿಗೂ ಗೊತ್ತಾಯ್ತು. ಆಗ ಕಲ್ಪನಾ ಅವರಿಗೆ ಸ್ವಲ್ಪ ಬೇಜಾರು ಆಯ್ತು. ಆ ಕ್ಷಣದಲ್ಲಿಯೇ ಡೈಲಾಗ್ ಇಂಪ್ರೂವ್ ಮಾಡಿಕೊಂಡ ಕಲ್ಪನಾ, ನಾನು ಹಾಲು ಕುಡಿಯುತ್ತೇನೆ. ನೀನು ಹುಲ್ಲು ಕುಡಿ ಎಂದರು.

ಕಲ್ಪನಾ ಅವರ ಈ ಡೈಲಾಗ್‌ಗೆ ಜನರು ಶಿಳ್ಳೆ ಹಾಕಿ ಚಪ್ಪಾಳೆ ತಟ್ಟಿದರು. ಇದರಿಂದ ವೇದಿಕೆ ಮೇಲಿದ್ದ ಬಸವರಾಜ್ ಅವರಿಗೆ ಮುಜುಗರ ಉಂಟಾಯ್ತು. ವೇದಿಕೆಯಲ್ಲಿ ಕಲ್ಪನಾ ಕೌಂಟರ್ ಕೊಟ್ಟಿದ್ದಕ್ಕೆ ಬಸವರಾಜ್ ಅವರಿಗೆ ಸಿಟ್ಟು ಬಂತು. ತೆರೆಯ ಹಿಂದೆ ಇದೇ ವಿಷಯವಾಗಿ ಇಬ್ಬರ ನಡುವೆ ಜಗಳ ಶುರುವಾಯ್ತು. ಕಲ್ಪನಾ ಎಷ್ಟು ಎತ್ತರವಾಗಿದ್ರೂ ಹೈ ಹೀಲ್ಸ್ ಹಾಕುತ್ತಿದ್ದರು. ಜಗಳದ ಸಂದರ್ಭದಲ್ಲಿ ಕಲ್ಪನಾ ಧರಿಸಿದ್ದ ಚಪ್ಪಲಿ ಬೆಲ್ಟ್ ಕಳಚಿತ್ತು. ಅದನ್ನು ಸರಿಮಾಡಿಕೊಳ್ಳಲು ಬಾಗಿದಾಗ, ನನಗೆ ಚಪ್ಪಲಿ ತೆಗೆದುಕೊಂಡೆಯಾ ಎಂದು ಬಸವರಾಜ್ ಹೊಡೆಯಲು ಆರಂಭಿಸಿದರು. ಕಲ್ಪನಾ ಅವರಿಗೆ ಹೇಳಲು ಅವಕಾಶ ಸಹ ಕೊಡದೇ ತುಂಬಾನೇ ಹೊಡೆದರು. ಎಷ್ಟು ಜನ ಬಂದು ಬಿಡಿಸಿದ್ರೂ ಬಸವರಾಜ್ ಕೇಳಲಿಲ್ಲ. ನಾಟಕ ಮುಗಿದ್ಮೇಲೆ ನಾನೆಲ್ಲಿ ನಿನಗೆ ಚಪ್ಪಲಿ ತೆಗೆದುಕೊಂಡೆ, ನಾನು ಅದನ್ನು ಸರಿ ಮಾಡಿಕೊಳ್ಳುತ್ತಿದ್ದೆ ಅಂದಾಗ ಬಸವರಾಜ್ ಅವರಿಗೆ ವಿಷಯ ಗೊತ್ತಾಯ್ತು ಎಂದು ಜಯಲಕ್ಷ್ಮೀ ಪಾಟೀಲ್ ಸಂದರ್ಶನದಲ್ಲಿ ಹೇಳಿದ್ದಾರೆ.

ಅಂದು ರಾತ್ರಿ ಬಸವರಾಜ್ ಗುಡಿಗೇರಿ ಅವರು ಕಲ್ಪನಾ ಜೊತೆಯಲ್ಲಿ ಐಬಿಗೆ ಹೋಗಿ ಸಮಾಧಾನ ಮಾಡಿದ್ರೆ ಅವರು ಆ*ತ್ಮಹತ್ಯೆಯ ನಿರ್ಧಾರ ತೆಗೆದುಕೊಳ್ಳುತ್ತಿರಲಿಲ್ಲ ಅನ್ನೋದು ನನ್ನ ಅಭಿಪ್ರಾಯ. ಆದ್ರೆ ರಾತ್ರಿ ನೀವು ಮತ್ತೆ ಹೋಗಿ ಜಗಳ ಮಾಡಿಕೊಂಡ್ರೆ ಹೇಗೆ ಎಂದು ಕೆಲವರು ಬೇರೊಬ್ಬ ಹುಡುಗನ ಬೈಕ್ ಮೇಲೆ ಕಲ್ಪನಾ ಅವರನ್ನು ಕಳುಹಿಸಿದ್ದರು. ಬಸವರಾಜ್ ಅವರು ಕೆಲಸದ ನಿಮಿತ್ತ ಹುಬ್ಬಳ್ಳಿಗೆ ಹೋದರು. ಆ ರಾತ್ರಿ ಬಸವರಾಜ್ ಐಬಿಗೆ ಹೋಗಿದ್ದರೆ ಕಲ್ಪನಾ ಸಾಯುತ್ತಿರಲಿಲ್ಲ ಎಂದು ಜಯಲಕ್ಷ್ಮೀ ಪಾಟೀಲ್ ಹೇಳಿದರು.

ರಾತ್ರಿ ಸಂಕೇಶ್ವರದಲ್ಲಿ ನಮ್ಮ ನಾಟಕ ಶುರುವಾಗಿದ್ದ ಸಂದರ್ಭದಲ್ಲಿ ಕಲ್ಪನಾ ಇನ್ನಿಲ್ಲ ಎಂಬ ವಿಷಯ ಬಂತು. ಅಲ್ಲಿ ಬಸವರಾಜ್ ಗುಡಿಗೇರಿಯವರು ಇಲ್ಲ. ನಾಟಕ ಅಲ್ಲಿಗೆ ನಿಂತು ಹೋಯ್ತು, ಬೆಳಗ್ಗೆ ಕಲ್ಪನಾ ಅವರನ್ನು ಬೆಳಗಾವಿ ಆಸ್ಪತ್ರೆಗೆ ಕೊಂಡೊಯ್ಯಲಾಯ್ತು. ತಾಯಿ ಕೊಟ್ಟಿದ್ದ ಕಿತ್ತಳೆ ಬಣ್ಣದ ಸೀರೆ ಧರಿಸಿ, ದೊಡ್ಡ ಕುಂಕುಮ ಇಟ್ಕೊಂಡದ್ದರು. ಲಿಪ್‌ಸ್ಟಿಕ್ ಹಾಕಿದ್ದರು. ಆ ದೃಶ್ಯ ಇನ್ನು ನನ್ನ ಕಣ್ಮುಂದಿದೆ. ನಂತರ ಅಲ್ಲಿಂದ ಅವರ ತಾಯಿ ಬಂದು ಕಲ್ಪನಾ ಶವ ತೆಗೆದುಕೊಂಡು ಹೋದರು ಎಂಬ ವಿಷಯ ನಮಗೆ ತಿಳಿಯಿತು ಎಂದು ಜಯಲಕ್ಷ್ಮೀ ಪಾಟೀಲ್ ಹೇಳಿದ್ದಾರೆ.





# ಅಮಿತಾಭ್ ಮೊದಲ ಕಿಸ್, ತಮಗಿಂತ 36 ವರ್ಷ ಕಿರಿಯ ನಟಿ ಮೇಲೆ ಲವ್

**ಮುಂಬೈ:** ಬಾಲಿವುಡ್ ನಟ ಅಮಿತಾಭ್ ಬಚ್ಚನ್ ತಮ್ಮ ಸಿನಿ ಕೆರಿಯರ್‌ನಲ್ಲಿ ಹಲವು ಕಲಾವಿದರೊಂದಿಗೆ ನಟಿಸಿದ್ದಾರೆ. ಇಂದಿಗೂ ಸಿನಿಮಾಗಳಲ್ಲಿಯೂ ಸಕ್ರಿಯವಾಗಿರುವ ನಟ ಅಮಿತಾಭ್ ಬಚ್ಚನ್ ಚಿತ್ರವೊಂದರಲ್ಲಿ ನಟಿಯೊಂದಿಗೆ ಕಿಸ್ಸಿಂಗ್ ಸೀನ್ ಮಾಡಿದ್ದಾರೆ. ಆದ್ರೆ ಚಿತ್ರದ ಈ ಕಿಸ್ ಸೀನ್ ಸಾಕಷ್ಟು ವಿವಾದಕ್ಕೂ ಕಾರಣವಾಗಿತ್ತು.

ಕಾರಣ ನಟಿ ಮತ್ತು ಅಮಿತಾಭ್ ಬಚ್ಚನ್ ನಡುವಿನ ವಯಸ್ಸಿನ ಅಂತರ 36 ವರ್ಷ ಆಗಿತ್ತು. ತಮಗಿಂತ 36 ವರ್ಷದ ನಟಿಗೆ ಕಿಸ್ ಮಾಡಿದರೂ ಸಿನಿಮಾ ಬಾಕ್ಸ್ ಆಫಿಸ್‌ನಲ್ಲಿ ನಿರೀಕ್ಷೆಯಷ್ಟು ಕಲೆಕ್ಷನ್ ಮಾಡಲಿಲ್ಲ. ಆದ್ರೆ ಈ ಸಿನಿಮಾ 57 ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ.

ಅಮಿತಾಭ್ ಬಚ್ಚನ್ ತಮ್ಮ ಸುದೀರ್ಘ ಚಲನಚಿತ್ರ ವೃತ್ತಿಜೀವನದಲ್ಲಿ ಪರದೆ ಮೇಲೆ ಒಮ್ಮೆ ಮಾತ್ರ ಕಿಸ್ ಮಾಡಿದ್ದಾರೆ. ಮೊದಲ ಬಾರಿಗೆ ಅಂತಹ ದೃಶ್ಯ ಮಾಡಿದಾಗ ಅಮಿತಾಭ್ ಬಚ್ಚನ್ ವಿರುದ್ಧ ಟೀಕೆಗಳು ವ್ಯಕ್ತವಾಗಿದ್ದವು. ಇಷ್ಟು ಚಿಕ್ಕ ವಯಸ್ಸಿನ ನಟಿಯೊಂದಿಗೆ ಕಿಸ್ ಮಾಡುವ ಅಗತ್ಯವಿತ್ತಾ ಎಂಬ ಪ್ರಶ್ನೆಗಳು ಕೇಳಿ ಬಂದಿದ್ದವು. ಟೀಕೆ ಟಿಪ್ಪಣಿಗಳ ನಡುವೆ ಬಿಡುಗಡೆಯಾದ ಚಿತ್ರಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆ ನಾಯಕಿ ಯಾರು ಮತ್ತು ಆ ಚಿತ್ರ ಯಾವುದು ಎಂಬುದರ ಮಾಹಿತಿ ಇಲ್ಲಿದೆ.

57 ಪ್ರಶಸ್ತಿಯನ್ನು ಪಡೆದುಕೊಂಡ ಸಿನಿಮಾ ಹೆಸರು ಬ್ಲ್ಯಾಕ್. ಈ ಚಿತ್ರದಲ್ಲಿ ನಟಿ ರಾಣಿ ಮುಖರ್ಜಿ ಜೊತೆ ಅಮಿತಾಭ್ ಬಚ್ಚನ್ ಕಿಸ್ ಮಾಡಿದ್ದರು. ಬ್ಲ್ಯಾಕ್ ಚಿತ್ರದಲ್ಲಿ ರಾಣಿ ಮುಖರ್ಜಿ ಅವರು, ನೋಡಲು, ಕೇಳಲು ಮತ್ತು ಮಾತು ಬಾರದ ಹುಡುಗಿಯ ಪಾತ್ರದಲ್ಲಿ ನಟಿಸಿದ್ದರು. ಇಂತಹ ಹುಡುಗಿಯ ಜೀವನದಲ್ಲಿ ಓರ್ವ ಶಿಕ್ಷಕ ಬರುತ್ತಾನೆ. ಈ ಶಿಕ್ಷಕ, ಮಾತನಾಡದೇ, ನೋಡದೇ ಮತ್ತು ಕೇಳದೆ ಎಲ್ಲವನ್ನೂ ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದನ್ನು ಕಲಿಸುತ್ತಾನೆ. ಒಂದು ಸನ್ನಿವೇಶದಲ್ಲಿ ಕಿಸ್ ಅನುಭವ ಹೇಗಿರುತ್ತೆ ಎಂದು ಯುವತಿ ಕೇಳುತ್ತಾಳೆ. ಈ ಪ್ರಶ್ನೆಗೆ ಕಿಸ್ ಮಾಡಿಯೇ ತೋರಿಸುತ್ತಾರೆ. ಈ ಶಿಕ್ಷಕನ ಪಾತ್ರದಲ್ಲಿ ಅಮಿತಾಭ್ ಬಚ್ಚನ್ ನಟಿಸಿದ್ದರು.

ರಾಣಿ ಮುಖರ್ಜಿ ಮತ್ತು ಅಮಿತಾಬ್ ಬಚ್ಚನ್ ಈ ಚಿತ್ರ ಮಾಡಿದಾಗ ಇಬ್ಬರ ವಯಸ್ಸಿನ ಅಂತರ 36 ವರ್ಷ ಆಗಿತ್ತು. ಬಾಕ್ಸ್ ಆಫಿಸ್‌ನಲ್ಲಿ ಬ್ಲ್ಯಾಕ್ ಸಿನಿಮಾ 32.21 ಕೋಟಿ ರೂಪಾಯಿ ಗಳಿಕೆ ಮಾಡಿತ್ತು. ಸ್ಯಾಟ್‌ಲೈಟ್ ರೈಟ್ಸ್ ಸೇರಿದಂತೆ ಚಿತ್ರ ಒಟ್ಟು 40.18 ಕೋಟಿ ರೂಪಾಯಿ ಗಳಿಕೆ ಮಾಡಿತ್ತು. ಚಿತ್ರ ಗಳಿಕೆಯ ವಿಷಯದಲ್ಲಿ ಸಾಧಾರಣ ಚಿತ್ರವಾಗಿದ್ದರೂ, ಪ್ರಶಸ್ತಿಗಳನ್ನು ಗಳಿಸುವ ವಿಷಯದಲ್ಲಿ ಅತ್ಯುತ್ತಮವಾಗಿತ್ತು. ಋಒಆಭ ಸೈಟ್ ಪ್ರಕಾರ, ಈ ಚಿತ್ರವು ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ಸುಮಾರು 57 ಪ್ರಶಸ್ತಿಗಳನ್ನು ಗೆದ್ದಿದೆ.

2005ರಲ್ಲಿ ಬಿಡುಗಡೆಯಾದ ಬ್ಲ್ಯಾಕ್ ಸಿನಿಮಾವನ್ನು ಸಂಜಯ್ ಲೀಲಾ ಭನ್ಸಾಲಿ ನಿರ್ದೇಶನ ಮಾಡಿದ್ದರು. ಈ ಸಿನಿಮಾ ಹೆಲೆನ್ ಕೆಲ್ಲೆರ್ ಅವರ ದಿ ಸ್ಟೋರಿ ಆಫ್ ಮೈ ಲೈಫ್ ಕಾದಂಬರಿ ಆಧಾರಿತವಾಗಿತ್ತು. ಸಂಜಯ್ ಲೀಲಾ ಭನ್ಸಾಲಿ ಮತ್ತು ಅಂಶುಮಾನ್ ಸ್ವಾಮಿ ಜೊತೆಯಾಗಿ ಬಂಡವಾಳ ಹೂಡಿಕೆ ಮಾಡಿದ್ದರು. 4ನೇ ಫೆಬ್ರವರಿ 2025ರಂದು ಚಿತ್ರ ವಿಶ್ವದಾದ್ಯಂತ ಬಿಡುಗಡೆಯಾಗಿತ್ತು. ಈ ಸಿನಿಮಾವನ್ನು ನೆಟ್‌ಫ್ಲಿಕ್ಸ್‌ನಲ್ಲಿ ನೋಡಬಹುದಾಗಿದೆ.

## 2020ರ ರಾಜ್ಯ ಸಿನಿಮಾ ಪ್ರಶಸ್ತಿ:

# ಪ್ರಜ್ವಲ್, ಅಕ್ಷತಾ ಅತ್ಯುತ್ತಮ ನಟ–ನಟಿ

2020ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪಟ್ಟಿ ಪ್ರಕಟ ಆಗಿದೆ. ‘ಜಂಟಲ್‌ಮ್ಯಾನ್’ ಸಿನಿಮಾದ ಅಭಿನಯಕ್ಕಾಗಿ ಪ್ರಜ್ವಲ್ ದೇವರಾಜ್ ಅವರು ‘ಅತ್ಯುತ್ತಮ ನಟ’ ಪ್ರಶಸ್ತಿ ಪಡೆದಿದ್ದಾರೆ. ‘ಪಿಂಕಿ ಎಲ್ಲಿ’ ಸಿನಿಮಾದ ಅಭಿನಯಕ್ಕಾಗಿ ಅಕ್ಷತಾ ಪಾಂಡವಪುರ ಅವರು ‘ಅತ್ಯುತ್ತಮ ನಟಿ’ ಪ್ರಶಸ್ತಿ ಪಡೆದಿದ್ದಾರೆ. ‘ಪಿಂಕಿ’ ಎಲ್ಲಿ ಸಿನಿಮಾಗೆ ಮೊದಲ ‘ಅತ್ಯುತ್ತಮ’ ಸಿನಿಮಾ ಪ್ರಶಸ್ತಿ ನೀಡಲಾಗಿದೆ. ಈ ಸಿನಿಮಾಗೆ ಪೃಥ್ವಿ ಕೋಣನೂರು ಅವರು ನಿರ್ದೇಶನ ಮಾಡಿದ್ದಾರೆ. ‘ವರ್ಣಪಟಲ’ ಸಿನಿಮಾಗೆ 2ನೇ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಸಿಕ್ಕಿದೆ. ‘ಹರಿವ ನದಿಗೆ ಮೈಯೆಲ್ಲ ಕಾಲು’ ಸಿನಿಮಾಗೆ ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ನೀಡಲಾಗಿದೆ.





‘ಗಿಳಿ ಪಂಚರದೊಳಿಲ್ಲ’ ಹಾಗೂ ‘ಈ ಮಣ್ಣು’ ಸಿನಿಮಾಗಳಿಗೆ ವಿಶೇಷ ಸಾಮಾಜಿಕ ಕಳಕಳಿಯ ಚಿತ್ರ ಪ್ರಶಸ್ತಿ ಕೊಡಲಾಗಿದೆ. ಅತ್ಯುತ್ತಮ ಜನಪ್ರಿಯ ಮನರಂಜನಾ ಸಿನಿಮಾ ಪ್ರಶಸ್ತಿಯನ್ನು ‘ಫೋರ್ ವಾಲ್ಸ್’ ಚಿತ್ರ ಪಡೆದುಕೊಂಡಿದೆ. ‘ಪದಕ’ ಸಿನಿಮಾ ‘ಅತ್ಯುತ್ತಮ ಮಕ್ಕಳ ಚಿತ್ರ’ ಪ್ರಶಸ್ತಿಗೆ ಭಾಜನವಾಗಿದೆ. ತುಳು ಭಾಷೆಯ ‘ಜೀಟಿಗೆ’ ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಭಾಷಾ ಸಿನಿಮಾ ಪ್ರಶಸ್ತಿ ಸಿಕ್ಕಿದೆ.

‘ತಲೆದಂಡ’ ಸಿನಿಮಾದಲ್ಲಿನ ಅಭಿನಯಕ್ಕಾಗಿ ರಮೇಶ್ ಪಂಡಿತ್ ಅವರು ‘ಅತ್ಯುತ್ತಮ ಪೋಷಕ ನಟ’ ಪ್ರಶಸ್ತಿಗೆ ಭಾಜನರಾಗಿದ್ದಾರೆ. ‘ದಂತಪುರಾಣ’ ಸಿನಿಮಾದಲ್ಲಿನ ನಟನೆಗಾಗಿ ಮಂಜುಳಮ್ಮ ಅವರಿಗೆ ‘ಅತ್ಯುತ್ತಮ ಪೋಷಕ ನಟಿ’ ಪ್ರಶಸ್ತಿ ನೀಡಲಾಗಿದೆ. ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿಯನ್ನು ಗಗನ್ ಬಡೇರಿಯಾ ಅವರು ‘ಮಾಲ್ಗುಡಿ ಡೇಸ್’ ಸಿನಿಮಾಗಾಗಿ ಪಡೆದಿದ್ದಾರೆ.

‘ಆಕ್ಟ್ 1978’ ಚಿತ್ರಕ್ಕಾಗಿ ನಾಗೇಂದ್ರ ಕೆ. ಉಜ್ಜನಿ ಅವರು ‘ಅತ್ಯುತ್ತಮ ಸಂಕಲನ’ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ‘ತಲೆದಂಡ’ ಚಿತ್ರಕ್ಕಾಗಿ ಅಶೋಕ್ ಕಶ್ಯಪ್ ಅವರಿಗೆ ‘ಅತ್ಯುತ್ತಮ ಛಾಯಾಗ್ರಹಣ’ ಪ್ರಶಸ್ತಿ ನೀಡಲಾಗಿದೆ. ಇದೇ ಸಿನಿಮಾದ ನಟನೆಗಾಗಿ ಮಾಸ್ಟರ್ ಆಹಿಲ್ ಅನ್ಸಾರಿಗೆ ‘ಅತ್ಯುತ್ತಮ ಬಾಲ ನಟ’ ಪ್ರಶಸ್ತಿ ಸಿಕ್ಕಿದೆ. ‘ಪಾರು’ ಚಿತ್ರಕ್ಕಾಗಿ ಬೇಬಿ ಹಿತೈಷಿ ಪೂಜಾರ್ ‘ಅತ್ಯುತ್ತಮ ಬಾಲನಟಿ’ ಪ್ರಶಸ್ತಿ ಪಡೆದಿದ್ದಾರೆ.

# ಬಾಲಿವುಡ್‌ನ ಪ್ರತಿಭಾವಂತ ನಟನನ್ನು ತೆಲುಗಿಗೆ ಕರೆತಂದ ನಟಿ ಸಮಂತಾ



ಸಮಂತಾ ಋತ್ ಪ್ರಭು ಈಗ ಸ್ಟಾರ್ ನಟಿ ಮಾತ್ರವಲ್ಲ ಪ್ರಭಾವಿ ನಟಿ ಸಹ ಹೌದು. ಬಾಲಿವುಡ್ ಸಿನಿಮಾದವರು ದಕ್ಷಿಣ ಭಾರತದಲ್ಲಿ ಸಿನಿಮಾ ಪ್ರಚಾರಕ್ಕೆ ಬಂದಾಗ ಸಮಂತಾರನ್ನು ಅತಿಥಿಯಾಗಿ ಕರೆಸುತ್ತಾರೆ. ಸಮಂತಾಗೆ ಬಾಲಿವುಡ್‌ನಲ್ಲೂ ಸಾಕಷ್ಟು ಅವಕಾಶಗಳು ಸಿಗುತ್ತಿವೆ. ಕಾಫಿ ವಿತ್ ಕರಣ್‌ಗೂ ಸಹ ಸಮಂತಾ ಹೋಗಿ ಬಂದಿದ್ದಾಗಿದೆ.

ಒಟ್ಟಾರೆ ತೆಲುಗು, ತಮಿಳು, ಹಿಂದಿ ಚಿತ್ರರಂಗ ಮೂರರಲ್ಲೂ ಪ್ರಭಾವ ಹೊಂದಿದ್ದಾರೆ ನಟಿ ಸಮಂತಾ. ಇದೀಗ ತಮ್ಮ ಪ್ರಭಾವ ಬಳಸಿ, ಬಾಲಿವುಡ್‌ನ ಯುವ ಪ್ರತಿಭಾವಂತ ನಟನನ್ನು ತೆಲುಗು ಚಿತ್ರರಂಗಕ್ಕೆ ಕರೆತಂದಿದ್ದಾರೆ. ಆತನಿಗೆ ಸಿನಿಮಾ ಸಿಗುವಂತೆ ಮಾಡಿದ್ದಾರೆ.



ಆದರ್ಶ್ ಗೌರವ್, ಬಾಲಿವುಡ್‌ನ ನಟ. ‘ದಿ ವೈಟ್ ಟೈಗರ್’ ಸಿನಿಮಾದಲ್ಲಿನ ಅವರ ನಟನೆ ನೋಡಿ ಭೇಷ್ ಎನ್ನದವರೇ ಇಲ್ಲ. ಅದ್ಭುತವಾದ ನಟರಾಗಿದ್ದರು ಸಹ ಬಾಲಿವುಡ್‌ನಲ್ಲಿ ಹೆಚ್ಚು ಅವಕಾಶಗಳು ಅವರಿಗೆ ಸಿಗುತ್ತಿರಲಿಲ್ಲ. ಸಿಕ್ಕರೂ ಸಹ ಸಣ್ಣ–ಪುಟ್ಟ ಪಾತ್ರಗಳಷ್ಟೆ. ಪ್ರಮುಖ ಪಾತ್ರ ಸಿಕ್ಕ ಸಿನಿಮಾಗಳು ಉತ್ತಮ ಪ್ರದರ್ಶನ ಮಾಡುತ್ತಿರಲಿಲ್ಲ. ಈ ನಟನ ನಟನೆ ಕಂಡು ಬಹುವಾಗಿ ಮೆಚ್ಚಿದ್ದ ಸಮಂತಾ, ಇದೀಗ ಆದರ್ಶ್ ಗೌರವ್ ಅವರನ್ನು ತೆಲುಗು ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ. ಅದೂ ತಮ್ಮ ಪ್ರಭಾವ ಬಳಸಿ.

ಆದರ್ಶ್ ಗೌರವ್ ಹೇಳಿಕೊಂಡಿರುವಂತೆ, ಅವರು ಸಮಂತಾರನ್ನು ‘ಸಿಟಾಡೆಲ್’ ವೆಬ್ ಸರಣಿಗೆ ಸಂಬಂಧಿಸಿದ ಪಾರ್ಟಿಯೊಂದರಲ್ಲಿ ಭೇಟಿ ಆಗಿದ್ದರಂತೆ. ಸಮಂತಾ, ತಮ್ಮ ನಟನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದಾಗ, ತಮಗೆ ತೆಲುಗು ಚಿತ್ರರಂಗದಲ್ಲಿ ಕೆಲಸ ಮಾಡುವ ಆಸೆ ಇರುವುದಾಗಿ ಹೇಳಿಕೊಂಡಿದ್ದಾರೆ ನಟಿ ಸಮಂತಾ. ಕೂಡಲೇ ಸಮಂತಾ, ಕೆಲವು ತೆಲುಗು ನಿರ್ಮಾಣ ಸಂಸ್ಥೆಗಳಿಗೆ ಕರೆ ಮಾಡಿ, ಆಡಿಷನ್ ವ್ಯವಸ್ಥೆ ಮಾಡಿಸಿದರಂತೆ.

ಆದರ್ಶ್ ಸಹ ಹೈದರಾಬಾದ್‌ಗೆ ಬಂದು ಕೆಲವು ಕಡೆ ಆಡಿಷನ್ ಕೊಟ್ಟಿದ್ದಾರೆ. ಮಾತ್ರವಲ್ಲದೆ, ಸಮಂತಾ, ತಮ್ಮ ಮ್ಯಾನೇಜರ್ ಅನ್ನು ಕೆಲ ದಿನಗಳ ಕಾಲ ಆದರ್ಶ್ ಜೊತೆಗೆ ಇರುವಂತೆ ಹೇಳಿ, ತೆಲುಗು ಚಿತ್ರರಂಗದ ಕೆಲ ಮುಖ್ಯ ಸಿನಿಮಾ ನಿರ್ದೇಶಕರು, ನಿರ್ಮಾಪಕರು, ಕಾಸ್ಟಿಂಗ್ ನಿರ್ದೇಶಕರು ಹಾಗೂ ನಟರನ್ನು ಭೇಟಿ ಮಾಡಿಸುವಂತೆ ಸೂಚಿಸಿದರಂತೆ. ಅಂತೆಯೇ ಸಮಂತಾರ ಮ್ಯಾನೇಜರ್, ಆದರ್ಶ್ ಅವರನ್ನು ಕರೆದುಕೊಂಡು ತೆಲುಗು ಚಿತ್ರರಂಗದ ಪ್ರಮುಖ ವ್ಯಕ್ತಿಗಳನ್ನು ಭೇಟಿ ಮಾಡಿಸಿದ್ದಾರೆ. ಎಲ್ಲರ ಬಳಿಯೂ ಆದರ್ಶ್‌ಗೆ ಪಾತ್ರ ಇದ್ದರೆ ಕೊಡಿ ಎಂದು ಮನವಿ ಮಾಡಿದ್ದಾರೆ. ಅಂತೆಯೇ ಆದರ್ಶ್ ಸಹ ತಮ್ಮ ಆಡಿಷನ್ ದೃಶ್ಯಗಳನ್ನು, ಫೋಟೊಗಳನ್ನು ಸಹ ಪ್ರಮುಖರೊಟ್ಟಿಗೆ ಹಂಚಿಕೊಂಡಿದ್ದಾರೆ.




# ಜಲಪಾತದಲ್ಲಿ ಬಿದ್ದ ಜಯಮಾಲಾರನ್ನು ಉಳಿಸಿದ್ದು ರಾಜ್‌ಕುಮಾರ್

80 ಮತ್ತು 90ರ ದಶಕದಲ್ಲಿ ಸಿಕ್ಕಾಪಟ್ಟೆ ಸಿನಿಮಾಗಳಲ್ಲಿ ನಟಿಸಿರುವ ಜಯಮಾಲಾ ಮತ್ತು ಅಂಬಿಕಾ ತಮ್ಮ ಜೀವನದಲ್ಲಿ ಮರೆಯಲಾಗದ ಕ್ಲೈಮ್ಯಾಕ್ಸ್ ಘಟನೆಗಳನ್ನು ಹಂಚಿಕೊಂಡಿದ್ದಾರೆ. ಈ ಹಿಂದೆ ನಡೆಯುತ್ತಿದ್ದ ಕ್ಲೈಮ್ಯಾಕ್ಸ್ ಸೀನ್‌ಗಳು ಎಷ್ಟು ಮುಖ್ಯವಾಗಿತ್ತು? ಪ್ರತಿ ಸೀನ್‌ಗಳಲ್ಲಿ ಎಷ್ಟು ಭಯ ಹುಟ್ಟಿಸುತ್ತಿತ್ತು? ಆ ಕಾಲದಲ್ಲಿ ಯಾವ ರೀತಿಯಲ್ಲಿ ಸೇಫ್ಟಿ ಇರುತ್ತಿತ್ತು ಎಂದು ಮಜಾ ಟಾಕೀಸ್ ಕಾರ್ಯಕ್ರಮದಲ್ಲಿ ಹಂಚಿಕೊಂಡಿದ್ದಾರೆ.

’ನನಗೆ ಹೈಟ್ ಸಮಸ್ಯೆ ಇದೆ. ಕರೆಕ್ಟ್ ಕ್ಲೈಮ್ಯಾಕ್ಸ್ ಚಿತ್ರೀಕರಣ ಸಮಯದಲ್ಲಿ ನನ್ನ ಪಾತ್ರಕ್ಕೆ ಹೈಟ್‌ನಲ್ಲಿ ನಿಲ್ಲಿಸಿಬಿಡುತ್ತಾರೆ. ಬಜಾರ್ ಸೀನಾ ಸಿನಿಮಾದಲ್ಲಿ ಕ್ಲೈಮ್ಯಾಕ್ಸ್ ಶೂಟಿಂಗ್‌ನ ಮೈಸೂರಿನ ಫ್ಯಾಕ್ಟರಿಯಲ್ಲಿ ಮಾಡಿದ್ದರು. ಎತ್ತರದಲ್ಲಿ ಗೀತಾ ಮತ್ತು ನನ್ನನ್ನು ಕಟ್ಟು ಹಾಕಿದರು, ಕೆಳಗಡೆ ಬೆಂಕಿ ಇದೆ ನಾವು ನಡೆದುಕೊಂಡು ಹೋಗಬೇಕು. ನನಗೆ ಹಾರ್ಟ್ ಬೀಟ್ ಜಾಸ್ತಿ ಆಯ್ತು ಸತ್ತು ಹೋಗುತ್ತೀನಿ ಅಂದುಕೊಂಡೆ. ಸಿನಿಮಾದ ಆ ಸೀನ್ ಈಗಲೂ ನೋಡಿದರೆ ನನ್ನ ಮುಖದಲ್ಲಿ ಭಯ ಎತ್ತು ಕಾಣುತ್ತದೆ. ಭಯ ಅನ್ನೋದ್ದಕ್ಕಿಂತ ಸತ್ತು ಹೋಗುತ್ತೀನಿ ಅನಿಸುತ್ತದೆ. ಇದೊಂದೆ ಅಲ್ಲ ಹಲವು ಸಿನಿಮಾಗಳಲ್ಲಿ ಕ್ಲೈಮ್ಯಾಕ್ಸ್‌ಗೆ ಅಂತ ಹೈಟ್‌ನಲ್ಲಿ ನಿಲ್ಲಿಸಿಬಿಡುತ್ತಿದ್ದರು’ ಎಂದು ಅಂಬಿಕಾ ಮಾತನಾಡಿದ್ದಾರೆ.

’ಗಿರಿಕನ್ಯ ಸಿನಿಮಾ ಮತ್ತು ಒಂದೆರಡು ಸಿನಿಮಾದಲ್ಲಿ ನಾನು ಸಾಯುವಂತ ಸಮಯ ಬಂದಿತ್ತು. ಹೊಗೆನೆಕಲ್‌ನಲ್ಲಿ ಕ್ಲೈಮ್ಯಾಕ್ಸ್ ಚಿತ್ರೀಕರಣ ನಡೆಯುತ್ತದೆ ಆಗ ನನ್ನನ್ನು ನೀರಿಗೆ ತಳ್ಳಿಬಿಡುತ್ತಾರೆ. ಆ ಸಮಯದಲ್ಲಿ ನನಗೆ ಹಗ್ಗ ಕಟ್ಟಿ ಒಂದು ಕಡೆ ನಿಲ್ಲಿಸಿದ್ದರು ಆಗ ಗೊಂದಲ ಸೃಷ್ಟಿ ಆಯ್ತು. ಸ್ವಾಮಿ ಅಂದುಕೊಂಡರು ಶಿವಯ್ಯ ಹತ್ರ ಹಗ್ಗ ಇದೆ ಅಂತ, ಶಿವಯ್ಯ ಅಂದುಕೊಂಡರು ಸ್ವಾಮಿ ಹತ್ರ ಹಗ್ಗ ಇದೆ ಎಂದು. ಇಲ್ಲಿ ರಾಜ್‌ಕುಮಾರ್ ಅವರ ಸಮಯ ಪ್ರಜ್ಞೆಯನ್ನು ಮೆಚ್ಚಬೇಕು. ದೊಡ್ಡವರು ಸಣ್ಣವರು ಎಂದು ಕಲಾವಿದರಲ್ಲಿ ಭೇದಭಾವ ಇಲ್ಲದೆ ಪ್ರತಿಯೊಂದು ದೃಶ್ಯಗಳನ್ನು ನೋಡುತ್ತಿದ್ದರು. ಈ ಘಟನೆ ನನಗೆ ನೀರಿನಿಂದ ಹೊರ ಬಂದ ಮೇಲೆ ತಿಳಿಯಿತ್ತು. ನಾನು ನೀರಿಗೆ ಬಿದ್ದು ಬಿಟ್ಟ ತಕ್ಷಣವೇ ರಾಜ್‌ಕುಮಾರ್ ಹಗ್ಗ ಹಿಡಿದುಕೊಂಡು ನನ್ನನ್ನು ಇಟ್ಟುಕೊಳ್ಳಿ ಎಂದು ಅಲ್ಲಿದ್ದವರಿಗೆ ಹೇಳಿ ನನ್ನನ್ನು ಮೇಲೆ ಕರ್ಕೊಂಡು ಬರ್ತಾರೆ. 20 ನಿಮಿಷ ಸುಧಾರಿಸಿಕೊಂಡೆ. ಅದಾದ ಮೇಲೆ ಶೂಟಿಂಗ್ ಪ್ಯಾಕಪ್ ಮಾಡಿದರು. ಕಲಾವಿದರನ್ನು ಬದುಕಿಸಬೇಕು ಅನ್ನೋ ಮನೋಭಾವ ಎಂದೂ ಮರೆಯುವುದಿಲ್ಲ’ ಎಂದು ಜಯಮಾಲಾ ಹೇಳಿದ್ದಾರೆ.



Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878